ವಿಷಯ: ಸೊರಬ ತಾಲ್ಲೂಕು, ಕಣ್ಣೂರು ಗ್ರಾಮದ ಸ.ನಂ. 26 ರ ಬಾಳಂದುರು, SF, ಅರಣ್ಯ ಪ್ರದೇಶದಲ್ಲಿ ಅನಧಿಕೃತವಾಗಿ ಸ್ವಾಧೀನಪಡಿಸಿಕೊಂಡು ಅರಣ್ಯೇತರ ಚಟುವಟಿಕೆ ಮಾಡುತ್ತಿರುವ ಬಗ್ಗೆ.

ಉಲ್ಲೇಖ: 1) ಮಾನ್ಯ ಸುಪ್ರೀಂ ಕೋರ್ಟಿನ ರಿಟ್ ಪಿಟಿಶನ್ ಸಂ : 202/1995. ದಿನಾಂಕ 12.12.1996

2) ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಭೂ ದಾಖಲೆ), ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳವರ ಕಛೇರಿ, ಅರಣ್ಯ ಭವನ, ಬೆಂಗಳೂರು ಪತ್ರ ಸಂಖ್ಯೆ : ಎ5/(ಎ) ಭೂಮಿ/ಒತ್ತುವರಿ/ಸಿ.ಆರ್–2/2007–08, ದಿನಾಂಕ : 22.05.2013.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸೊರಬ ತಾಲ್ಲೂಕು, ಕಣ್ಣೂರು ಗ್ರಾಮದ ಸ.ನಂ. 26 ರ ಬಾಳಂದುರು, SF, ಅರಣ್ಯ ಪ್ರದೇಶದಲ್ಲಿ ಅನಧಿಕೃತವಾಗಿ 5.00 ಎಕರೆ ಭೂಮಿಯನ್ನು ನೀವು ಅನಧಿಕೃತವಾಗಿ ಸ್ವಾಧೀನ ಹೊಂದಿರುವ ಬಗ್ಗೆ ಕರ್ನಾಟಕ ಅರಣ್ಯ ಕಾಯಿದೆ, 1963 ರ ಕಲಂ 24(e)(g)(gg)(h) ಮತ್ತು 73(d) ಜೊತೆಗೆ ಕೇಂದ್ರ ಅರಣ್ಯ (ಸಂರಕ್ಷಣಾ) ಕಾಯ್ದೆ 1980ರ ಕಲಂ 2(ii) ನ ಉಲ್ಲಂಘನೆ ಮಾಡಿರುತ್ತೀರಿ.

ಆದ್ದರಿಂದ ಮಾನ್ಯ ನ್ಯಾಯಾಲಯಗಳ ಹಾಗೂ ಸರ್ಕಾರಿ ಆದೇಶಗಳನ್ವಯ ಮೇಲ್ಕಂಡಂತೆ ಒತ್ತುವರಿ ಮಾಡಲಾದ ENII No.1100307956 ಸ.ನಂ. 26 ರಲ್ಲಿ 5.00 ಎಕರೆ ಭೂಮಿಯನ್ನು ನೀವು ಅನಧಿಕೃತವಾಗಿ ಸ್ವಾಧೀನ ಹೊಂದಿರುವ ಬಗ್ಗೆ ನಿಮ್ಮಲ್ಲಿ ಅಧಿಕೃತ ದಾಖಲಾತಿಗಳೇನಾದರೂ ಲಭ್ಯವಿದ್ದಲ್ಲಿ ರುಜುವಾತುಪಡಿಸಲು ಸೂಕ್ತ ಅವಕಾಶ ನೀಡಲಾಗಿದೆ. ಗ್ರಾಮ ಅರಣ್ಯ ಹಕ್ಕು ಸಮಿತಿ ಅರ್ಜಿ ಹಾಕಿದ್ದಲ್ಲಿ ಅದರ ದಾಖಲಾತಿಗಳೊಂದಿಗೆ ಹಾಜರಾಗುವುದು.

ಇದು ಒಂದು ನೋಟಿಸೇ? ಇದರ ಜೊತೆಯಲ್ಲಿಯೇ ಇನ್ನೊಂದು ನೋಟೀಸ್‌ನಲ್ಲಿ ಹೇಳಿರುವ ಅಂಶವೇನೆಂದರೆ ನಿವು ಯಾವುದೇ ದಾಖಲೆ ಸಮೇತ ರುಜುವಾತುಪಡಿಸಲು ತಪ್ಪಿದಲ್ಲಿ ನಿಮ್ಮಲ್ಲಿ ಏನೂ ಇರುವುದಿಲ್ಲವೆಂದು ಪರಿಗಣಿಸಿ ಏಕಪಕ್ಷೀಯವಾಗಿ ತೀರ್ಮಾನ ತೆಗೆದುಕೊಳ್ಳಲಾಗುವುದು.

ಅಧ್ಯಕ್ಷರು:– Head of the department ಅವರು ಒಂದು ನಿರ್ದೇಶನ ಕೊಟ್ಟಿರಬಹುದು. ಇಲ್ಲವೆಂದು ನಾನು ಹೇಳುತ್ತಿಲ್ಲ. ಅವರು ಮಾನ್ಯ ಸರ್ವೋಚ್ಚ ನ್ಯಾಯಾಲಯದ ರಕ್ಷಣೆ ಪಡೆಯುವ ಅಗತ್ಯವಿಲ್ಲ. ಇಲ್ಲಿ ಒಂದು ಸರ್ಕಾರವಿದೆ ಮತ್ತು ಮುಖ್ಯಮಂತ್ರಿ, ಮಂತ್ರಿಗಳಿದ್ದಾರೆ. ಸರ್ಕಾರದ ತೀರ್ಮಾನದ ಪ್ರಕಾರ ಬರೆದುಕೊಳ್ಳುವುದಕ್ಕೆ ಅವಕಾಶವಿದೆ. ಈ tendency ಅನ್ನು ನಿಲ್ಲಿಸಬೇಕೆಂದು ನಾನು ಹೇಳುತ್ತಿರುವುದು. ಸುಪ್ರೀಂಕೋರ್ಟ್ ಅವರ consumption ನಲ್ಲಿ ಅವರು ಹೇಳುತ್ತಾರೆ. ತೀರ್ಮಾನ ಮಾಡುವ ಸಂದರ್ಭದಲ್ಲಿ ಆ consumption ಇಟ್ಟುಕೊಂಡು ನಿಮ್ಮದೇ ಆದ consumption ಮಾಡಿ ತೀರ್ಮಾನ ಮಾಡಿ. ಒಂದು ನೋಟೀಸ್ ಕೊಡುವಾಗಲೂ ಸಹ ಸುಪ್ರೀಂ ಕೋರ್ಟಿನ ಅಂಶಗಳನ್ನಿಟ್ಟುಕೊಂಡು ಕೊಡುವುದೇ? Are you so weak? Incapable to run the Administration? ಆ ರೀತಿ ಮಾಡಕೂಡದು. ಅರಣ್ಯ ಇಲಾಖೆಯಲ್ಲಿ ಕೆಲವು ಅಧಿಕಾರಿಗಳಿದ್ದು, ಅವರಿಗೆ ಅರಣ್ಯ ಇಲಾಖೆಯವರು ಏನು ತೀರ್ಮಾನ ಮಾಡುತ್ತದೋ ಮಾಡಲಿ ಎಂದು ಹೇಳಿ. ಇದನ್ನು ನಿಲ್ಲಿಸಬೇಕು. ತಹಶೀಲ್ದಾರ್ ಅವರು ಕೊಟ್ಟಿರುವಂತಹದ್ದು ನನ್ನ ಹತ್ತಿರ ತಂದಿಟ್ಟುಕೊಂಡಿದ್ದೆನೆ. Is it style of functioning? ಸರ್ಕಾರ ಏನು ತೀರ್ಮಾನ ತೆಗೆದುಕೊಳ್ಳುತ್ತದೆಯೋ ತೆಗೆದುಕೊಳ್ಳಲಿ. ಅರಣ್ಯ ಕಾನೂನಿನಲ್ಲಿ ಏನಿದಯೋ ಅದನ್ನು ಮಾಡಿ. Conservation Act ನಲ್ಲಿ ಏನಿದಯೋ ಅದನ್ನು ಮಾಡಲಿ. ಮಾತೆತ್ತಿದರೆ ಸುಪ್ರೀಂಕೋರ್ಟ್, ಮಾತೆತ್ತಿದರೆ ಸುಪ್ರೀಂಕೋರ್ಟ್. ಇದು ಯಾವ ರೀತಿಯ ವ್ಯವಹಾರ?

ಶ್ರೀ ವೈ.ಎಸ್.ವಿ. ದತ್ತಾ:– ಮಾತೆತ್ತಿದರೆ ಸುಪ್ರೀಂ ಕೋರ್ಟ್ ಇಲ್ಲವೆಂದರೆ ಬಲ ಸುಬ್ರಹ್ಮಣಂ ವರದಿ ಅಂದರೆ ಹೈ ಕೋರ್ಟ್. . . . .

ಅಧ್ಯಕ್ಷರು:– ಅದನ್ನು ಬಿಡಿ. ನಮ್ಮಲ್ಲಿ ಆದಂತಹ ಕೆಲವು ತಪ್ಪುಗಳಿಂದ ಈ ರೀತಿ ಆಟ ನಡೆಯುತ್ತಿದೆ. ಇದರಲ್ಲಿ ಸರ್ಕಾರ firm opinion ಮಾಡಲಿ. ನೀವು ಏನು ತೀರ್ಮಾನ ಮಾಡಿಕೊಳ್ಳುತ್ತಿರೋ ಮಾಡಿಕೊಳ್ಳಿ. ಏನೂ ತೊಂದರೆ ಇಲ್ಲ. ಅದಕ್ಕೆ ಹೈಕೋರ್ಟ್ ಮತ್ತು ಸುಪ್ರೀಂಕೋರ್ಟ್ ಅನ್ನು ಏಕೆ ಎಳೆಯುವುದಕ್ಕೆ ಹೋಗುತ್ತೀರಿ? ನಿಮಗೆ ಅದರ ಜೀರ್ಣಕ್ಕೆ ಬೇಕು ಎನ್ನುವುದಾದರೆ ನೀವು ಹಂಚಿಕೊಳ್ಳಿರಿ. ಆದರೆ, ಇದರಲ್ಲಿ ಹೇಳುವುದಕ್ಕೆ ಹೋಗಬೇಡಿ. ಅರಣ್ಯ ಹಕ್ಕು ಕಾನೂನು ಪ್ರಕಾರ ಅರ್ಜಿ ಕೊಟ್ಟುಕೊಂಡು ಎಲ್ಲರೂ enactment ಇಟ್ಟುಕೊಳ್ಳಿ. ಇವರದ್ದು ಆಗಲಿ, ಆಮೇಲೆ ಹೇಳುತ್ತೇನೆ.

ಶ್ರೀ ವೈ.ಎಸ್.ವಿ. ದತ್ತಾ:– ಮಾನ್ಯ ಅಧ್ಯಕ್ಷರೆ, ನಿವು ಹೇಳಿದ ಮೇಲೆ ನೀವೇ ಒಂದು ದೊಡ್ಡ ಜನಾಂದೋಲನ ಮಾಡಬಹುದು. ತಮಗೆ ನಾವು ಹೃತ್ಪೂರ್ವಕವಾದ ಧನ್ಯವಾದಗಳನ್ನು ಸಲ್ಲಿಸುತ್ತೇವೆ. ಅರಣ್ಯ ಹಕ್ಕು ಸಮಿತಿ ರಚನೆ ಮಾಡುವಂಥದ್ದಕ್ಕೆ ಇಡೀ ಕರ್ನಾಟಕ ರಜ್ಯದಾದ್ಯಂತ ಜನಜಾಗೃತಿ ಮೂಡಿಸಿರುವ ಏಕಮೇವ ದ್ವೀತಿಯ ಹರಿಕಾರರು ತಾವೇ ಆಗಿದ್ದೀರಿ. ಹಾಗಾಗಿ, ನಾವು ನಿಮ್ಮನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇವೆ. ಅವುಗಳನ್ನು ನಾವು ಸಮಿತಿಗಳನ್ನಾಗಿ ಮಾಡಿಕೊಂಡು ಇಟ್ಟುಕೊಂಡಿದ್ದೇವೆ. ಅದನ್ನು ತೆಗೆದುಕೊಂಡು ಹೋಗಿ ಕೊಟ್ಟರೆ ಅದಕ್ಕೆ ಮಾನ್ಯತೆ ಇಲ್ಲ.

ಅಧ್ಯಕ್ಷರು:– ಎಲ್ಲಿ?

ಶ್ರೀ ವೈ.ಎಸ್.ವಿ. ದತ್ತಾ:– ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ.

ಅಧ್ಯಕ್ಷರು:– ಯಾರು ಮಾನ್ಯತೆ ಕೊಡಬೇಕು?

ಶ್ರೀ ಆರ್.ವಿ. ದೇಶಪಾಂಡೆ (ಉನ್ನತ ಶಿಕ್ಷಣ, ಪ್ರವಾಸೋದ್ಯಮ ಸಚಿವರು):– ಮಾನ್ಯ ಅಧ್ಯಕ್ಷರೆ, ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರನ್ನು ಕೇಳಿ. ನನ್ನ ಜಿಲ್ಲೆಯಲ್ಲಿ ಗ್ರಾಮದಿಂದ ಸಮಿತಿ ಮಾಡಿದ್ದೇವೆ. ಕೆಲಸ ಪ್ರಾರಂಭ ಮಾಡಿದ್ದೇವೆ. ಹೀಗೆ ಹೇಳಿದರೆ ಹೇಗೆ? ತೊಂದರೆ ಆಗಿದ್ದರೆ ನನ್ನ ಕ್ಷೇತ್ರದಲ್ಲಿ ತೊಂದರೆ ಆಗಿದೆ ಎಂದು ದಯಮಾಡಿ ಹೇಳಿ. ಇಡೀ ರಾಜ್ಯದಲ್ಲಿ ಕೆಲಸ ಪ್ರಾರಂಭ ಮಾಡಿದ್ದೇವೆ. ಆಸ್ಪತ್ರೆಗಳನ್ನು ಕೊಡುವುದಕ್ಕೆ ಪ್ರಾರಂಭ ಮಾಡಿದ್ದೇವೆ.

ಶ್ರೀ ವೈ.ಎಸ್.ವಿ. ದತ್ತಾ:– ಮಾನ್ಯ ಅಧ್ಯಕ್ಷರೆ, ಹಾಗಾದರೆ, ಉತ್ತರ ಕರ್ನಾಟಕ ಜಿಲ್ಲೆಯ ಅಧಿಕಾರಿಗಳಿಗೆ ಅರ್ಥವಾಗಿದೆ. ಚಿಕ್ಕಮಗಳೂರು ಜಿಲ್ಲೆಯ ಅಧಿಕಾರಿಗಳಿಗೆ ಅರ್ಥವಾಗಿಲ್ಲ.

ಅಧ್ಯಕ್ಷರು:– ಮಾನ್ಯ ದತ್ತಾರವರೆ, ನೀವು ಹೋರಾಟ ಮಾಡಿ. ಸುಮ್ಮನೆ ಕುಳಿತುಕೊಂಡರೆ ಆಗುವುದಿಲ್ಲ. ಇನ್‌ಕ್ವಿಲಾಬ್ ಜಿಂದಾಬಾದ್ ಹೋರಾಟ ಮಾಡಿ. ಏಕೆ ಆಗುವುದಿಲ್ಲ? ಅಲ್ಲಿ ಭಾಷಣ ಮಾಡಿ. ಸರ್ಕಾರದಿಂದ ಸ್ಪಷ್ಟ ನಿರ್ದೇಶನ ಹೋಗಿದೆ. ಆ ಹಕ್ಕು ಸಮಿತಿಗಳು ಕೆಲಸ ಮಾಡುವಾಗ ಎಲ್ಲ ಇಲಾಖೆಯವರು ಸಹಕಾರ ಕೊಡಬೇಕೆಂದು ಸರ್ಕಾರದಿಂದ ಸ್ಪಷ್ಟ ನಿರ್ದೇಶನ ಇದೆ. ಆ ನಿರ್ದೇಶನದ ಪ್ರಕಾರ ಯಾವ ಇಲಾಖೆಯವರು ನಿಮಗೆ ಸಹಕಾರ ಕೊಡುವುದಿಲ್ಲ, ಅವರ ವಿರುದ್ಧವಾಗಿ ಸರ್ಕಾರದ ಗಮನವನ್ನು ಸೆಳೆಯಿರಿ. Directions issue ಮಾಡುತ್ತಾರೆ. ಏಕೆ ಹೆದರಬೇಕು?

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್:– ಮಾನ್ಯ ಅಧ್ಯಕ್ಷರೆ, ನನ್ನ ವಿನಂತಿ ಏನೆಂದರೆ, ನಾನು ಆಗಲೇ ಮಾತನಾಡುವಾಗ ಹೇಳಿದ್ದೇನೆ. ಫಾರಂ 50 ಯಲ್ಲಿ ಹಲವಾರು ಅರ್ಜಿಗಳು reject ಆಗಿವೆ. ಫಾರಂ 53 ಯಲ್ಲಿಯೂ ಕೂಡ reject ಆಗಿದೆ. ಅವರಿಗೆಲ್ಲಾ ಇನ್ನೊಂದು ಅವಕಾಶವನ್ನು ಕೊಡುವಂಥ ವ್ಯವಸ್ಥೆಯನ್ನು ಮಾಡಬೇಕು. ಅದರ ಜೊತೆಗೆ, ನಾನು ಆಗಲೇ ಹೇಳಿದ ಹಾಗೆ ಏನು ಸರ್ಕಾರಿ ಜಾಗಕ್ಕೆ ಇವತ್ತು. . .

ಅಧ್ಯಕ್ಷರು:– ಮಾನ್ಯ ಅಪ್ಪಚ್ಚು ರಂಜನ್‌ರವರೆ, ತಾವು ಹೀಗೆ ಹೇಳಿ. ಈಗ ಸರ್ಕಾರ ತೀರ್ಮಾನ. ಅದು Policy matter ಅದು ಅವರಿಗೆ ಬಿಟ್ಟಿದ್ದು. ಹಿಂದೆ ಕೆಲವರಿಗೆ ಅರ್ಜಿ ಕೊಡುವುದಕ್ಕೆ ಅವರ ದಡ್ಡತನದಿಂದಲೋ, ಏನೋ ಕಾರಣದಿಂದ ಉಳಿದು ಹೋಗಿದ್ದರೆ ಅವರಿಗೆ ಕೊಡಬೇಕೆಂದು ಒಂದು ಸಲಹೆ ಬಂತು. ಆ ನಿಟ್ಟಿನಲ್ಲಿ ಹೇಳಿ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್:– ಮಾನ್ಯ ಅಧ್ಯಕ್ಷರೆ, ಆ ನಿಟ್ಟಿನಲ್ಲಿಯೇ ಹೇಳುತ್ತಿದ್ದೇನೆ. ಇವತ್ತು ಏನು applications ಎಲ್ಲ reject ಆಗಿವೆ, ಅವರಿಗೆ ಮರು ಅವಕಾಶವನ್ನು ಕೊಡುವಂಥ ವ್ಯವಸ್ಥೆಯನ್ನು ಮಾಡಬೇಕು. ಹೊಸ application ಕೊಡುವಂಥ ವ್ಯವಸ್ಥೆ ಆಗಬೇಕು. ಎರಡನೆಯದಾಗಿ, 1993 ರಲ್ಲಿ land bank ಗೆ ಕೊಟ್ಟಂಥ ಜಾಗವನ್ನು verification ಮಾಡಿ, ಅದರಲ್ಲಿ ನಿಜವಾಗಿ ರೈತರು ವ್ಯವಸಾಯ ಮಾಡಿದ್ದರೆ ಅದನ್ನು ವಾಪಸ್ಸು ಕೊಡಿಸುವಂಥ ವ್ಯವಸ್ಥೆ ಮಾಡಬೇಕು. ಅವರಿಗೆ ಕೂಡ ಅವಕಾಶವನ್ನು ಒದಗಿಸಿಕೊಡಬೇಕೆನ್ನುವುದು ನನ್ನ ಬೇಡಿಕೆಯಾಗಿದೆ. ಈಗಾಗಲೇ document ಇಲ್ಲವೆನ್ನುವಂಥ ವಿಚಾರವನ್ನು ಹೇಳಿದರು. ಮಾನ್ಯ ಅಧ್ಯಕ್ಷರೆ, ಇವತ್ತು ನನಗೆ ಮಾತನಾಡಲು ಅವಕಾಶ ಕೊಡುತ್ತೀರೆಂದು ನನಗೆ ಗೊತ್ತಿರಲಿಲ್ಲ. ನಾನು documents ಅನ್ನು LH ನಲ್ಲಿ ಇಟ್ಟಿದ್ದೇನೆ. ಮಾನ್ಯ ವಿಶ್ವೇಶ್ವರ ಹೆಗಡೆಯವರು ಮಾತನಾಡುವುದರೊಳಗಾಗಿ ಬೇಕಾದರೆ ನಾನು ತಂದು ಕೊಡುತ್ತೇನೆ. ತಹಶೀಲ್ದಾರರು ಯಾವ ರೀತಿಯ ನೋಟಿಸ್ ಅನ್ನು ಕೊಟ್ಟಿದ್ದಾರೆ, A.C ಯವರು ಯಾವ ರೀತಿಯ ನೋಟಿಸ್ ಅನ್ನು ಕೊಟ್ಟಿದ್ದಾರೆ ಎನ್ನುವ ಬಗ್ಗೆ ನಾನು ಬೇಕಾದರೆ ತೆಗೆದು ಕೊಂಡು ಬಂದು ಕೊಡುತ್ತೇನೆ. 28 cent ಗೂ ಕೊಡುವಂಥದ್ದು, 14 cent ಗೂ ಕೂಡ ನೋಟಿಸ್ ಕೊಡುವಂಥ ಕೆಲಸ ಮಾಡಿದ್ದಾರೆ. ಇದರಿಂದ ಜನರಲ್ಲಿ ಒಂದು ರೀತಿಯಲ್ಲಿ ಜಿಗುಪ್ಸೆ ಉಂಟಾಗಿದೆ. ಅವರಿಗೆ ನೋಟಿಸ್ ಕೊಟ್ಟ ಕೂಡಲೇ ಅವರು ನಮ್ಮ ಮನೆಯಲ್ಲಿ ಬಂದು ಠಿಕಾಣಿ ಹೂಡುತ್ತಾರೆ. ನಾವು ಸಣ್ಣ ವಯಸ್ಸಿನವರಾದರೂ ಕೂಡ ವಯಸ್ಸಾದಂಥವರು ನಮ್ಮ ಕಾಲಿಗೆ ಅಡ್ಡ ಬೀಳುತ್ತಾರೆ. ಆ ರೀತಿ ಪರಿಸ್ಥಿತಿ ಆಗಿದೆ. ಆ ರೀತಿಯಲ್ಲಿ ಜನ ಭಯಭೀತರಾಗಿದ್ದಾರೆ. ಸರ್ಕಾರಕ್ಕೆ vigilance ಇದೆ, intelligence ಇದೆ. ನೀವು ಕೊಡಗಿನಲ್ಲಿ ಪರಿಸ್ಥಿತಿ ಹೇಗಾಗಿದೆ ಎಂದು ರಿಪೋರ್ಟ್ ತೆಗೆದುಕೊಳ್ಳಿ. ಆ ರಿಪೋರ್ಟ್ ಅನ್ನು ನೋಡಿದಾಗ ನಿಮಗೆ ಅರ್ಥವಾಗುತ್ತದೆ. ಕಸ್ತೂರಿ ರಂಗನ್ ವರದಿ ಬಂದ ಸಂದರ್ಭದಲ್ಲಿ ಕೊಡಗಿನಲ್ಲಿ ಪಕ್ಷಾತೀತವಾಗಿ, ಜಾತ್ಯಾತೀತವಾಗಿ ಸ್ವಯಂಪ್ರೇರಿತ ಬಂದ್ ಆಯಿತು. ಬಂದ್ ಆದರೂ ಕೂಡ ಎಸ್‌ಪಿಯವರು ಸ್ವಯಂಪ್ರೇರಿತ ಬಂದ್ ಆಗಿದೆ, ಶಾಂತಿಯುತವಾದ ಬಂದ್ ಆಗಿದೆ ಎಂದು ಹೇಳಿಕೆಯನ್ನು ನೀಡಿದರು. ಆದರೆ,

ಕೊನೆಯಲ್ಲಿ ಕೇಸ್ ರಿಜಿಸ್ಟರ್ ಮಾಡುವಾಗ ಒಬ್ಬ ಜಿಲ್ಲಾಪಂಚಾಯತ್ ಸದಸ್ಯನ ಮೇಲೆ ಹಾಗೂ ಒಬ್ಬ ಗ್ರಾಮ ಪಂಚಾಯಿತಿ ಅಧ್ಯಕ್ಷರ ಮೇಲೆ ಸೇರಿಸಿ ಕೇಸ್ ಅನ್ನು ದಾಖಲೆ ಮಾಡುವಂಥ ಕೆಲಸವನ್ನು ಮಾಡಿದ್ದಾರೆ. ಯಾವುದೇ ಆಸ್ತಿ-ಪಾಸ್ತಿಯನ್ನು ನಷ್ಟ ಮಾಡಲಿಲ್ಲ.

ಅಧ್ಯಕ್ಷರು:- ಏತಕ್ಕಾಗಿ?

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್:- ಮಾನ್ಯ ಅಧ್ಯಕ್ಷರೆ, ಧರಣಿ, ಮುಷ್ಕರ, ರಸ್ತೆ ತಡೆ ಮಾಡಿದ್ದಾರೆಂದು.

ಅಧ್ಯಕ್ಷರು:- ಅದು ಬೇರೆ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್:- ಮಾನ್ಯ ಅಧ್ಯಕ್ಷರೆ, ಆ ರೀತಿ ವ್ಯವಸ್ಥೆ ಆಗುತ್ತಿದೆ.

ಅಧ್ಯಕ್ಷರು:- ಅದಕ್ಕೆ ಹೋರಾಟ ಮಾಡಿದವರ ಮೇಲೆ ಕೇಸ್ ಹಾಕುತ್ತಾರೆ ಅಂತಲೇ ಕೆಲವೊಂದು ಹಾಗೆ ಬಿಡುತ್ತಾರೆ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್:- ಮಾನ್ಯ ಅಧ್ಯಕ್ಷರೆ, ಹೋರಾಟ ಮಾಡಿದಾಗ ಶಾಂತಿಯುತ ಬಂದ್ ಎಂದು ಹೇಳಿದ್ದಾರೆ. ಬೆಳಗಾಂನಲ್ಲಿ ಎಲ್ಲಾ ಎಂ.ಎಲ್.ಎ.ಗಳು ಸೇರಿ ಮಾಡಿದ್ದೆವು.

ಅಧ್ಯಕ್ಷರು:- ನಾವೆಲ್ಲಾ ಭೂ ಅಕ್ರಮ ಚಳುವಳಿ ಮಾಡುವಾಗ ರಾಮನಗರಕ್ಕೆ ಹೋದ ಸಂದರ್ಭದಲ್ಲಿ ಅರೆಸ್ಟ್ ಮಾಡಿದರು. ನಂತರ ಬಿಟ್ಟರು.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್:- ಮಾನ್ಯ ಅಧ್ಯಕ್ಷರೆ. ವಾಹನಗಳು ಓಡಾಡುವ ರಸ್ತೆಯನ್ನು ತಡೆ ಮಾಡಲಿಲ್ಲ. ಆ ರಸ್ತೆಯಲ್ಲಿ ಬಂದವರನ್ನು ಸ್ವಲ್ಪ ಸಮಯ ತಡೆದು ನಂತರ ಬಿಟ್ಟಿದ್ದೇವೆ. ಆದೆ, ಕೇಸ್ ದಾಖಲು ಮಾಡಿ ಒಂದು ರೀತಿಯಲ್ಲಿ ಅಲ್ಲಿನ ಅಧಿಕಾರಿಗಳೆಲ್ಲರೂ ಕೂಡ ಕೊಡಗಿನಲ್ಲಿ ಜನರ ಸಂಕಷ್ಟಗಳಿಗೆ ಸ್ಪಂದನೆ ಮಾಡುವಂಥ ಕೆಲಸವನ್ನು ಮಾಡುತ್ತಿಲ್ಲ.

ಅಧ್ಯಕ್ಷರು:- ಅದನ್ನು ವಿಚಾರ ಮಾಡಿ ಎಂದು ಹೇಳಿ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್:– ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಬರುವಂಥ ಸಂದರ್ಭದಲ್ಲಿ ನಾನು ಇರಲಿಲ್ಲ. ನಾನು ಅಮೇರಿಕಾಕ್ಕೆ ಹೊಗಿದ್ದೆ. ಹಾಗಾಗಿ, ನನಗೆ ಹೇಳುವುದಕ್ಕೆ ಸಾಧ್ಯವಾಗಲಿಲ್ಲ. ನಾನು ಇದ್ದಿದ್ದರೆ ಎಲ್ಲ ವಿಚಾರವನ್ನು ನಾನು ನೇರವಾಗಿ ಹೇಳುತ್ತಿದ್ದೆ. ಈ ರೀತಿಯಲ್ಲಿ ಪರಿಸ್ಥಿತಿ ಇದೆ. ದಯವಿಟ್ಟು, ಅದಕ್ಕೆ ಒಂದು ಆದೇಶವನ್ನು ಮಾಡುವಂಥ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು. ಬಡವರ, ಕೂಲಿಕಾರ್ಮಿಕರ, ಹರಿಜನ–ಗಿರಿಜನರ ಕಣ್ಣೀರು ಒರೆಸುವಂಥ ಕೆಲಸವನ್ನು ಈ ಸರ್ಕಾರ ಮಾಡಬೇಕೆಂಬ ವಿಚಾರವನ್ನು ಹೇಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ. ಧನ್ಯವಾದಗಳು.

ಅಧ್ಯಕ್ಷರು:– ಚಿಕ್ಕಮಗಳೂರಿನವರು ಮಾತನಾಡಿ.

ಶ್ರೀ ಎಸ್. ಮಧು ಬಂಗಾರಪ್ಪ (ಸೊರಬ):– ಮನ್ಯ ಅಧ್ಯಕ್ಷರೆ, ಒಂದು ನಿಮಿಷ. ನಿಮ್ಮ ಟೇಬಲ್‌ಗೆ ಕಳುಹಿಸಿರುವ ಎರಡು ಪತ್ರಗಳು ಸೊರಬಕ್ಕೆ ಸಂಬಂಧಿಸಿದ್ದೇ ಆಗಿದೆ. ಇವರು ನೋಟಿಸ್ ಕೊಡಬೇಕಾದರೆ 'ಅರಣ್ಯ ಸಮಿತಿಗೆ ನೀವೇನಾದರೂ ಅರ್ಜಿ ಹಾಕಿದ್ದರೆ ಅದನ್ನು ತನ್ನಿ' ಎಂದು ಒಬ್ಬರು ACF ಅವರು ಹೇಳುತ್ತಾರೆ. ಶಿಕಾರಿಪುರದಿಂದ ACF ಅವರು ಏನು ಮಾಡುತ್ತಾರೆಂದರೆ, ಏಕೆಂದರೆ ನನ್ನ ಕ್ಷೇತ್ರ ಎರಡಕ್ಕೂ ಬರುತ್ತದೆ. ಅವರು 'ನಿಮ್ಮ ಹತ್ತಿರ ಯಾವುದೂ ಪತ್ರ ಇಲ್ಲವಾದರೆ ಏಕಪಕ್ಷೀಯವಾಗಿ ತೆಗೆದುಕೊಳ್ಳುತ್ತೇವೆ, ಅರಣ್ಯ ಸಮಿತಿಗೆ ಹಾಕಿದರೆ ನಮಗೆ ಅನುಕೂಲವಾಗುತ್ತದೆ ಎಂದು ಹೇಳುತ್ತಾರೆ. ನಾಳೆ ದಿವಸ ಅಗಲ ಹೊಡೆಯುತ್ತಾರೆಂದು ರೈತರು ಹೆದರಿಕೊಂಡು ಕುಳಿತುಕೊಂಡಿದ್ದಾರೆ. ಅವರಿಗೆ ಕಾಲಾವಕಾಶ ಬಹಳ ಕಡಿಮೆ ಕೊಡುತ್ತಾರೆ. ಅವರ ಹತ್ತಿರ ಹೋಗಿ ಹಿಡುವಳಿ ಪತ್ರ ಕೇಳುತ್ತಾರೆ. 10 ಎಕರೆ ಕೊಡುವಂಥ ಅವಕಾಶ ಅರಣ್ಯ ಸಮಿತಿಯಲ್ಲಿ ಇದೆ. ಅವರಿಗೆ ಏನಾದರೂ ಬೇರೆ ಹಿಡುವಳಿ ಇದ್ದರೆ ಇದರಲ್ಲಿ 10 ಎಕರೆ ಕಡಿಮೆ ಆಗುತ್ತದೆಯೇ?

ಅಧ್ಯಕ್ಷರು:– ಮಾನ್ಯ ಮಧು ಬಂಗಾರಪ್ಪನವರೆ, ದಯವಿಟ್ಟು, ಹಿಡುವಳಿ ಮಿತಿಯನ್ನು ಅದರಲ್ಲಿ ಹಾಕಿಲ್ಲ. ಅವರಿಗೆ ತಲೆ ಕೆಟ್ಟಿದೆ, ಕೇಳುತ್ತಾರೆ. ಸರ್ಕಾರ ಇರುವುದು ಕಾನೂನನ್ನು ತಿಳಿದುಕೊಳ್ಳುವುದಕ್ಕೆ.

ಶ್ರೀ ಎಸ್. ಮಧು ಬಂಗಾರಪ್ಪ:– ಮಾನ್ಯ ಅಧ್ಯಕ್ಷರೆ, ಆ ಹಿಡುವಳಿ ಪತ್ರ ಬೇಡ ಎಂದು ತಮ್ಮನ್ನು ಕೇಳಿಕೊಳ್ಳುತ್ತೇನೆ. Income Certificate ಕೇಳುತ್ತಾರೆ.

ಅಧ್ಯಕ್ಷರು:– ಯಾರು ಕೇಳುತ್ತಿದ್ದಾರೆ?

ಶ್ರೀ ಎಸ್. ಮಧು ಬಂಗಾರಪ್ಪ:– ಮಾನ್ಯ ಅಧ್ಯಕ್ಷರೆ, ಅಲ್ಲಿ ಕೇಳುತ್ತಿದ್ದಾರೆ.

ಅಧ್ಯಕ್ಷರು:– ಯಾರು ತೋರಿಸಿ ಎಂದು ಕೇಳುತ್ತಾರೆ? ಅವರು ಕೇಳಿರುವುದನ್ನು ತಂದು ಇಲ್ಲಿ ಸದನದಲ್ಲಿಡಿ.

ಶ್ರೀ ಎಸ್. ಮಧು ಬಂಗಾರಪ್ಪ:– ಮಾನ್ಯ ಅಧ್ಯಕ್ಷರೆ, Social Welfare Officer ರವರು.

ಅಧ್ಯಕ್ಷರು:– ಈ ಸದನದಲ್ಲಿ ಇಡಿ.

ಶ್ರೀ ಎಸ್. ಮಧು ಬಂಗಾರಪ್ಪ:– ಮಾನ್ಯ ಅಧ್ಯಕ್ಷರೆ, ಆಯಿತು.

ಅಧ್ಯಕ್ಷರು:– ಇದು ಸಮಾಜ ಕಲ್ಯಾಣ ಸಚಿವರಿಗೆ ಸಂಬಂಧಪಟ್ಟ ವಿಚಾರವಾಗಿದೆ. ನಾಳೆ ಅವರನ್ನು ಬರುವುದಕ್ಕೆ ಹೇಳೋಣ. simple ಇದೆ. ಚರ್ಚೆಗೆ ನಾಳೆ ತೆಗೆದುಕೊಳ್ಳುತ್ತೇವೆ. ಉತ್ತರ ಹೇಳುವಾಗ ಉತ್ತರ ಹೇಳಿಸೋಣ.

ಶ್ರೀ ಎಸ್. ಮಧು ಬಂಗಾರಪ್ಪ:– ಮಾನ್ಯ ಅಧ್ಯಕ್ಷರೆ, ಆಯಿತು.

ಅಧ್ಯಕ್ಷರು:– ನಾನು ಸಮಾಜ ಕಲ್ಯಾಣ ಸಚಿವರಿಗೆ ಹೇಳಿದ್ದೇನೆ. ಅಧಿಕಾರಿಗಳು ಅವರದೇ ಒಂದು ಸಾಮ್ರಾಜ್ಯ ಎನ್ನುವ ರೀತಿಯಲ್ಲಿ ನಡೆದುಕೊಳ್ಳುತ್ತಿದ್ದಾರೆ. ಇದು ಆಗಬಾರದು. ಸರ್ಕಾರದಿಂದ ಒಂದು ನಿರ್ದಿಷ್ಟವಾದಂಥ ಆದೇಶ ಹೊರಗಿದೆ. ಇದಕ್ಕೆ ಇನ್ನೂ ಸ್ವಲ್ಪ clarification ಕೊಟ್ಟರೆ ಕಪ್ಪೆ ಆಚೆಗೆ, ಈಚೆಗೆ ಹಾರುವಂಥದ್ದನ್ನು ನಿಲ್ಲಿಸುವುದಕ್ಕೆ ಸಾಧ್ಯವಾಗುತ್ತದೆ. ಮಾನ್ಯ ನಿಂಗಯ್ಯನವರೆ, ಮಾತನಾಡಿ.

ಶ್ರೀ ಬಿ.ಬಿ. ನಿಂಗಯ್ಯ (ಮೂಡಿಗೆರೆ):– ಮಾನ್ಯ ಅಧ್ಯಕ್ಷರೆ, ಇದು ಬಹಳ ಗಂಭೀರವಾದ ವಿಚಾರ. ಇಡೀ ಹಳ್ಳಿ ಜನರ ನಿದ್ದೆಗೆಡಿಸಿರುವಂಥದ್ದು. ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಮೊದಲನೆಯದಾಗಿ ಅಭಿನಂದನೆಯನ್ನು ಸಲ್ಲಿಸುತ್ತೇನೆ. ನನ್ನ ಕ್ಷೇತ್ರದಲ್ಲಿ 3 ಗುಂಟೆ, 8 ಗುಂಟೆ, 1/2

ಎಕರೆಗೆ ಕೂಡ ನೋಟಿಸ್ ಕೊಟ್ಟಿದ್ದಾರೆ. SC/ST ಗಳಿಗೆ ಎಲ್ಲೆಲ್ಲಿ 3 ಗುಂಟೆ, 5 ಗುಂಟೆ ಮನೆಗಳು ಎಂದು ಮಾಡಿಕೊಂಡಿದ್ದರು ಅಂಥದ್ದಕ್ಕೂ ಕೂಡ ಇವತ್ತು ರೆವಿನ್ಯೂ ಇಲಾಖೆಯಿಂದ ನೋಟಿಸ್ ಕೊಡತಕ್ಕಂಥ ಕೆಲಸ ಆಗಿದೆ.

ಅಧ್ಯಕ್ಷರು:– ಏಕೆ? ಅದನ್ನು ಹೇಳಿದ್ದಿರಾ?

ಶ್ರೀ ಬಿ.ಬಿ. ನಿಂಗಯ್ಯ:– ಮಾನ್ಯ ಅಧ್ಯಕ್ಷರೆ, ಬಾಲಸುಬ್ರಮಣ್ಯಮ್ ವರದಿ

ಅಧ್ಯಕ್ಷರು:– ನಾವು ಮಾಡಿದ ತಪ್ಪಿಗೋಸ್ಕರ ಪ್ರಾಯಶ್ಚಿತವನ್ನು ಅನುಭವಿಸಿ ಎಂದು ಒಂದು ಪದ ಹೇಳಿ ನೋಡೋಣ.

ಶ್ರೀ ಬಿ.ಬಿ. ನಿಂಗಯ್ಯ:– ಮಾನ್ಯ ಅಧ್ಯಕ್ಷರೆ, ಎಲ್ಲ ಬಲ್ಲವರಾದ ನಿಮ್ಮಲ್ಲಿ ನಾನು ನಿಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದು ಇಷ್ಟೆ.

ಅಧ್ಯಕ್ಷರು:– ಅದನ್ನು withdraw ಮಾಡಿ ಎಂದು ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಹಾಗೂ ಕಂದಾಯ ಸಚಿವರಿಗೆ ಯಾವಾಗ ಬರೆದಿದ್ದೇನೆ ಎಂದು ಕೇಳಿ. ನೀವು ಬರೆದಿದ್ದೀರಿ? ಹೇಳಿ ನೋಡೋಣ.

ಶ್ರೀ ಎನ್. ಹೆಚ್. ಕೋನರೆಡ್ಡಿ:– ಮಾನ್ಯ ಅಧ್ಯಕ್ಷರೆ, ಈ ಸದನ ನೀವು ಹೇಳಿದಂತೆ ಕೇಳುತ್ತದೆ. ನಾವೆಲ್ಲರೂ ಒಪ್ಪುತ್ತೇವೆ. ನೀವು ಏನು ಕಾನೂನು ಬೇಕು ಅದನ್ನು ಮಾಡಿಸಿ. ನಾವು 224 ಮಂದಿ ಒಪ್ಪುತ್ತೇವೆ.

ಶ್ರೀ ವೈ.ಎಸ್.ವಿ. ದತ್ತ:– ಮಾನ್ಯ ಅಧ್ಯಕ್ಷರೆ, ಸದನದ ಸಾರ್ವಭೌಮರು ನೀವು. ಇದರೊಳಗೆ ನಮ್ಮದೇನು ಇದೆ.?

ಶ್ರೀ ವೈ.ಎನ್. ರುದ್ರೇಶ್‌ಗೌಡ:– ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ 2–3 ದಿವಸಗಳಿಂದ ಚರ್ಚೆ ನಡೆಯುತ್ತಿದೆ. ಒಂದು ತೀರ್ಮಾನಕ್ಕೆ ಬನ್ನಿ.

ಅಧ್ಯಕ್ಷರು:– ಕಂದಾಯ ಸಚಿವರು ಉತ್ತರ ಹೇಳುತ್ತಾರೆ. ಅವರು ಸೋಮವಾರ ತಪ್ಪಿದರೆ ಮಂಗಳವಾರ ಉತ್ತರ ಹೇಳುತ್ತೇವೆಂದು ಹೇಳಿದ್ದಾರೆ.

ಶ್ರೀ ವೈ.ಎನ್. ರುದ್ರೇಶ್‌ಗೌಡ:– ಮಾನ್ಯ ಅಧ್ಯಕ್ಷರೆ, ಈ ಅಧಿವೇಶನದೊಳಗೆ ಇದು ಅಂತಿಮವಾಗಬೇಕು. ಇಲ್ಲದಿದ್ದರೆ ನಾವು ಊರಿಗೆ ಹೊಗುವುದಕ್ಕೆ ಬಿಡುವುದಿಲ್ಲ.

ಅಧ್ಯಕ್ಷರು:– ಮಾನ್ಯ ರುದ್ರೇಶ್‌ಗೌಡರೆ, ಹಾಗಾದರೆ, ಇಲ್ಲಿಯೇ ಇರಿ. ಎಲ್ಲಿಗೂ ಹೋಗಬೇಡಿ. ಇಲ್ಲಿ ನಾವು ಎಷ್ಟು ಜನ ಕುಳಿತುಕೊಂಡಿದ್ದೇವೆ?

ಶ್ರೀ ಬಿ.ಬಿ. ನಿಂಗಯ್ಯ:– ಮಾನ್ಯ ಅಧ್ಯಕ್ಷರೆ, ನಾವು ಇಲ್ಲಿ 224 ಜನ ಕುಳಿತಿದ್ದೇವೆ.

ಅಧ್ಯಕ್ಷರು:– ಬೆಂಗಳೂರಿನಲ್ಲಿ ಕುಳಿತಿದ್ದಾರೆ. ಏನೂ ಸಂಬಂಧವಿಲ್ಲ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್:– ಮಾನ್ಯ ಅಧ್ಯಕ್ಷರೆ, ಅರಣ್ಯ ಮಂತ್ರಿಗಳು, ರೆವಿನ್ಯೂ ಮಂತ್ರಿಗಳು ಇಲ್ಲೇ ಇದ್ದಾರೆ. ಅವರು ಗಟ್ಟಿ ಮನಸ್ಸು ಮಾಡಬೇಕಾಗುತ್ತದೆ. ಮುಖ್ಯಮಂತ್ರಿಗಳೂ ಕೂಡ ಇಲ್ಲೇ ಇದ್ದಾರೆ. ಅವರು ಗಟ್ಟಿ ಮನಸ್ಸು ಮಾಡಬೇಕಾಗುತ್ತದೆ.

ಅಧ್ಯಕ್ಷರು:– ಮಾಡುತ್ತಾರೆ, ಏನೂ ತೊಂದರೆಯಿಲ್ಲ.

ಶ್ರೀ ಬಿ.ಬಿ. ನಿಂಗಯ್ಯ:– ಮಾನ್ಯ ಅಧ್ಯಕ್ಷರೆ, ಒತ್ತುವರಿ ಎನ್ನುವುದು ಇವತ್ತಿನಿಂದ ಬಂದಿರುವುದಿಲ್ಲ.

ಶ್ರೀ ಎಂ.ಪಿ. ಅಪ್ಪಚ್ಚು (ರಂಜನ್):– ನಾವು ಅಧಿಕಾರದಲ್ಲಿದ್ದಾಗ ಯಾರನ್ನೂ ಖಾಲಿ ಮಾಡಿಸುವುದಕ್ಕೆ ಹೋಗಿಲ್ಲ, ನೋಟೀಸ್ ಕೂಡ ಕೊಟ್ಟಿಲ್ಲ.

ಶ್ರೀ ಬಿ.ಬಿ. ನಿಂಗಯ್ಯ:– ಯಾವ ಸರ್ಕಾರ ಮಾಡಿತು ಎನ್ನುವುದಕ್ಕಿಂತಲೂ ಈಗ ಜನರ ಕುತ್ತಿಗೆಗೆ ಬಂದಿದೆ. ಹಳ್ಳಿ ಜನರು ಎಂದು ಅಲ್ಲ, ನಮ್ಮೆಲ್ಲರ ನಿದ್ದೆಗೆಡಿಸಿದೆ. ತಾವು serious ಆಗಿ view ಮಾಡಿ ಹೇಳಿದ್ದೀರಿ. ಒಬ್ಬ ಬಾಲಸುಬ್ರಮಣಿಯನ್ ಇಡೀ ರಾಜ್ಯದ . . . . .

ಶ್ರೀ ಬಿ. ರಮಾನಾಥ ರೈ (ಮಾನ್ಯ ಅರಣ್ಯ ಸಚಿವರು):– ಯಾವ ಬಾಲಸುಬ್ರಮಣಿಯನ್? ಯಾವ ಕಮಿಟಿ?

ಶ್ರೀ ಬಿ.ಬಿ. ನಿಂಗಯ್ಯ:– ಕಮಿಟಿ form ಮಾಡಿದ್ದು ಸರ್ಕಾರ. ಕಮಿಟಿ ವರದಿ ಕೊಟ್ಟ ಮೇಲೆ . . . . . .

ಶ್ರೀ ಸಿ.ಟಿ. ರವಿ:– ಇವರಿಗೆ ಯಾವ ಭಾಷೆಯಲ್ಲಿ ಹೇಳಿದರೆ ಅರ್ಥವಾಗುತ್ತದೆ? ಯಾವ ಬಾಲಸುಬ್ರಮಣಿಯನ್ ಎಂದು, ಅವರ ವರದಿಯನ್ನು ಇವರು ಒಪ್ಪಿಕೊಂಡಿದ್ದಾರೋ, ಇಲ್ಲವೋ ಎಂದು ಹೇಳಲಿ. ಬರೀ ರಾಜಕಾರಣ ಮಾಡುವುದಷ್ಟೇನೆ ಇವರ ಕೆಲಸ.

ಅಧ್ಯಕ್ಷರು:– ಅವರು ಉತ್ತರ ಕೊಡುವಾಗ ಹೇಳುತ್ತಾರೆ ಬಿಡಿ.

ಶ್ರೀ ಸಿ.ಟಿ. ರವಿ:– ಒಪ್ಪಿಕೊಂಡಿಲ್ಲವೆಂದರೆ ಒಪ್ಪಿಕೊಂಡಿಲ್ಲವೆಂದು ಹೇಳಲಿ. ಅದೇ ಭಗವದ್ಗೀತಾನೇ? ಬಂದೂಕು ಕೈಯಲ್ಲಿದೆ ಎಂದ ತಕ್ಷಣ ಎದುರುಗಡೆ ಇದ್ದವರಿಗೆ ಗುಂಡು ಹಾರಿಸಬೇಕೆಂದು ಅಲ್ಲ.

ಶ್ರೀ ಬಿ. ರಮಾನಾಥ ರೈ:– ರಾಜಕಾರಣ ಮಾಡುತ್ತಿಲ್ಲ, ಯಾರೋ ಮಾಡಿದ ತಪ್ಪಿಗೆ ನಮ್ಮ ಮುಖಕ್ಕೆ ಕೈ ತೋರಿಸಬಾರದು. ಕಮಿಟಿ ರಚನೆ ಮಾಡಿ ಕಾನೂನು ಬಿಗಿ ಮಾಡಿರುವವರು ಯಾರು?

ಅಧ್ಯಕ್ಷರು:– ರವಿಯವರೆ, ಉತ್ತರ ಹೇಳುವಾಗ ಹೇಳುತ್ತಾರೆ.

ಶ್ರೀ ಸಿ.ಟಿ. ರವಿ:– ಈ ವಿಷಯವೇನು ತಮಾಷೆಯೇ?

ಶ್ರೀ ಬಿ. ರಮಾನಾಥ ರೈ:– ಮಾನ್ಯ ಅಧ್ಯಕ್ಷರೆ, ಎಲ್ಲರೂ ಕೂಡ ಅಧಿಕಾರ ಸ್ಥಾನದಲ್ಲಿ ಇದ್ದವರೆ, ಅಂತಿಮ ತೀರ್ಮಾನ ಮಾಡುವುದಕ್ಕೆ ನಾವೇನು ಬದ್ಧರಾಗಿದ್ದೇವೆ, ಏನೇನೊ ಆಗಿದೆ, ಇದು ಇವತ್ತು ನಿನ್ನೆಯ ವಿಚಾರವಲ್ಲ. 10–15 ವರ್ಷದ ವಿಷಯದ ಬಗ್ಗೆ ಇಷ್ಟೆಲ್ಲಾ ಚರ್ಚೆ ಮಾಡುತ್ತೀರಿ, ಅದಕ್ಕೆಲ್ಲಾ ಜವಾಬ್ದಾರರು ಆಯಾ ಹಂತದಲ್ಲಿ ಆಯಾ ಸಂದರ್ಭದಲ್ಲಿ ಯಾರ್ಯಾರಿರುತ್ತಾರೋ ಅವರು ಜವಾಬ್ದಾರರಾಗುತ್ತಾರೆ. ನಾವು ಕೂಡಾ ಅದಕ್ಕೆ ಸಂಬಂಧಪಟ್ಟವರೇ ಆಗಿದ್ದೇವೆ. ನಾವು ಅದನ್ನು ಸರಿಪಡಿಸಿ ಕ್ರಮ ಕೈಗೊಳ್ಳುವ ಕೆಲಸವನ್ನು ಮಾಡುತ್ತೇವೆ. ಆದರೆ, ಹಂತ ಹಂತವಾಗಿ ಆಯಾ ಸಂದರ್ಭಕ್ಕೆ ಆಯಾ ಸಮಯಕ್ಕೆ ಅವರವರು ಅಧಿಕಾರ ಸ್ಥಾನದಲ್ಲಿದ್ದು,

ಅವರೂ ಕೂಡ ಕಾರಣರಾಗುತ್ತಾರೆ ಇದಕ್ಕೆ. ಅದನ್ನು ಒಪ್ಪಿಕೊಳ್ಳಬೇಕು. ಬೇರೆ ಮಾತನಾಡಿದರೆ ಪ್ರಯೋಜನವಿಲ್ಲ.

ಶ್ರೀ ಬಿ.ಬಿ. ನಿಂಗಯ್ಯ:– ಅದೇನು ಬಾಲಸುಬ್ರಹ್ಮಣ್ಯ ವರದಿ ಎಂದು ಹಗುರವಾಗಿ ಮಾತನಾಡಿದರು. ಇದು ಹಗುರವಾಗಿ ಮಾತನಾಡುವಂಥ ವಿಚಾರವಲ್ಲ ಎನ್ನುವುದನ್ನು ರವಿಯವರು ಹೇಳಿದ್ದೇ ಹೊರತು ಬೇರೆ ಏನೂ ಅಲ್ಲ. ಹಿಂದಿನ ಸರ್ಕಾರದವರು ತಪ್ಪು ಮಾಡಿದ್ದಾರೆ. ನಿಜ. ಅದು ಸರಿಯಾಗಬೇಕಲ್ಲ.

ಶ್ರೀ ಸಿ.ಟಿ. ರವಿ:– ಒಳ್ಳೆ ಉದ್ದೇಶದಿಂದಲೇ ಬಾಲಸುಬ್ರಮಣಿಯನ್‌ರವರ ಸಮಿತಿಯನ್ನು ಆಗಿನ ಸರ್ಕಾರ ನೇಮಕ ಮಾಡಿತು. ಅವರು ವರದಿ ಕೊಟ್ಟರು. ಅದನ್ನು ನಮ್ಮ ಸರ್ಕಾರ ಒಪ್ಪಿಕೊಂಡಿಲ್ಲ. ಇವರು ಸಹ ಒಪ್ಪಿಕೊಂಡಿಲ್ಲವೆಂದು ಹೈಕೋರ್ಟಿಗೆ ಉತ್ತರ ಕೊಟ್ಟರೆ ಇವರ ಗಂಟೇನು ಹೋಗುತ್ತದೆ? ಹೈಕೋರ್ಟಿನಲ್ಲಿ ಏಕೆ ಒಪ್ಪಿಕೊಂಡಿದ್ದೀರಿ ಎಂದು ಹೇಳಿದರು? ಮಾಡುವುದನ್ನೆಲ್ಲಾ ಮಾಡಿ ಈಗ ಮಾತನಾಡಿದರೆ ಹೇಗೆ?

ಅಧ್ಯಕ್ಷರು:– ರವಿಯವರೆ, ಉತ್ತರ ಕೊಡುವಾಗ ಹೇಳುತ್ತಾರೆ ಬಿಡಿ.

(ಗೊಂದಲ)

ಶ್ರೀ ಸಿ.ಟಿ. ರವಿ:– ಅಲ್ಲಿ ಅಫಿಡವಿಟ್ ಕೊಟ್ಟಿಲ್ಲ. ಕೊಟ್ಟಿರುವುದು ನಿಮ್ಮ ಕಾಲದಲ್ಲಿ, ಈ ಕಡೆ ನೀವು ಕೈ ತೋರಿಸಬೇಡಿ.

ಶ್ರೀ ಬಿ. ರಮಾನಾಥ ರೈ:– ಇದಕ್ಕೆ ರಾಜಕಾರಣ ಎಂದು ಹೇಳುವುದು.

(ಗೊಂದಲ)

ಶ್ರೀ ಬಿ. ರಮಾನಾಥ ರೈ:– ನಮ್ಮ ಸೊರಬ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಉತ್ತರ ಕೊಟ್ಟಿರುವುದರಲ್ಲಿ ಏನಿದೆಯೆಂದರೆ, ಅತಿಕ್ರಮಣ ಮಾಡಿರುವ ರೆಕಾರ್ಡ್ ಇದ್ದರೆ ಅದನ್ನು ತಂದು ಒಪ್ಪಿಸಿ ಎಂದು ಹೇಳಿದ್ದಾರೆ. ಸುಪ್ರೀಂ ಕೋರ್ಟ್ ಉಲ್ಲೇಖಿಸಿ ಹೇಳಿರುವ ಪ್ರಕಾರವಾಗಿ ನಿಮ್ಮಲ್ಲಿ ಏನಿದೆ, ಆ ದಾಖಲೆಯನ್ನು ತನ್ನಿ ಎಂದು ಹೇಳಿ ನೋಟೀಸ್ ಕೊಟ್ಟಿದ್ದಾರೆ. ನನಗೆ

ಗೊತ್ತಿಲ್ಲ, ಈಗ ತಾವು ಓದಿದಂತೆ ಇರುವ ವಿಷಯವನ್ನು ಹೇಳುತ್ತಿದ್ದೇನೆ. ಇದನ್ನು ದೊಡ್ಡದಾಗಿ ಹೇಳುವ ಪ್ರಸಂಗ ಏನಿದೆ, ತಾವು ಏನು ಹೇಳುತ್ತಿದ್ದೇವೆಂದರೆ ಫಾರಂ ನಂ.50, 53ನಲ್ಲಿ ಅಥವಾ ಅರಣ್ಯ ಹಕ್ಕು ಕಾಯಿದೆಯಲ್ಲಿ ಅರ್ಜಿ ಹಾಕಿದ್ದರೆ ತೋರಿಸಿ ಎಂದು ಹೇಳಿದ್ದೇವೆ. ಇದನ್ನು ತಪ್ಪು ಎಂದು ಹೇಳುವುದಕ್ಕೆ ಆಗುವುದಿಲ್ಲ. ಅರಣ್ಯ ಹಕ್ಕು ಕಾಯಿದೆಯಲ್ಲಿ ಒಂದು ಹಂತದಲ್ಲಿ ಎಲ್ಲಾ 90% reject ಆಗಿರುವಂಥದ್ದೇ ಆಗಿದೆ. ನಮ್ಮ ಸಭಾಧ್ಯಕ್ಷರು ನಮಗೆ reject ಆಗಿದೆ, ನೀವು ಮತ್ತೆ ಅದಕ್ಕೆ ಜೀವ ತುಂಬಬೇಕೆಂದು ಸೂಚನೆ ಕೊಟ್ಟರು. ನಾವು cabinet sub-committee ಯಲ್ಲಿ ಕುಳಿತು ಮತ್ತೆ ಅರ್ಜಿ ತೆಗೆದುಕೊಳ್ಳುವುದಕ್ಕೆ ಕಾಲಾವಕಾಶವನ್ನು ಕೊಟ್ಟು ಮತ್ತೆ reject ಆಗಿರುವುದನ್ನು ಪುನರ್ ಪರಿಶೀಲನೆ ಮಾಡಬೇಕೆಂದು ತೀರ್ಮಾನ ಮಾಡಿ, ಈಗ ಸಾಕಷ್ಟು ಮಂದಿ ಆ ನಂತರ ಅರ್ಜಿ ಹಾಕಿದ್ದಾರೆ. ಸಾವಿರಾರು ಮಂದಿ ಅರ್ಜಿ ಹಾಕಿದ್ದಾರೆ. ನಾವು ಏನೂ ಮಾಡಿಲ್ಲ ಎಂದು ನೀವು ಹೇಳಿದರೆ ಅದನ್ನು ಒಪ್ಪುವುದಕ್ಕೆ ನಾನು ತಯಾರಿಲ್ಲ.

ಅಧ್ಯಕ್ಷರು:– ನೀವು ಮಾಡಿರುವ ಕೆಲಸದ ಬಗ್ಗೆ ನಾನು ಹೇಳಿದ್ದೇನೆ.

ಶ್ರೀ ಬಿ. ರಮಾನಾಥ ರೈ:– ಕಾನೂನಿನಡಿಯಲ್ಲಿ ಏನು ಕೆಲಸ ಮಾಡಬೇಕೋ ಅಷ್ಟೇ ಮಾಡಬೇಕು. ಅತಿಕ್ರಮಣ ಮಾಡುವುದಕ್ಕೆ ಪ್ರೋತ್ಸಾಹ ಕೊಡುತ್ತಾರೆಂದು ಒಂದು ಕಡೆ ಹೇಳುತ್ತಾರೆ. ಅತಿಕ್ರಮಣವನ್ನು ತೆರವು ಮಾಡಿಸುತ್ತಿಲ್ಲ ಎನ್ನುವಂಥ ಆರೋಪ ಸಹ ನಮ್ಮ ಮೇಲೆ ಮಾಡುತ್ತಾರೆ. ಒಕ್ಕಲೆಬ್ಬಿಸುತ್ತಾರೆ ಎಂದು ಸಹ ನಮ್ಮ ಮೇಲೆ ಆರೋಪ ಮಾಡುತ್ತಾರೆ. ಎರಡು ಆರೋಪದ ಮಧ್ಯೆ ನಾವು ಕೆಲಸ ಮಾಡಬೇಕು.

ಶ್ರೀ ವೈ.ಎಸ್.ವಿ. ದತ್ತಾ:– ರಮಾನಾಥರೈ ರವರೆ ನೀವು ಹೇಳುತ್ತಿರುವುದು ಅತಿಕ್ರಮಣವನ್ನು ತೆರವು ಮಾಡಿಸಬೇಕು, ಒಕ್ಕಲೆಬ್ಬಿಸಬಾರದು, ಆ ರೀತಿಯಲ್ಲ, ಯಾರನ್ನು ಮುಟ್ಟಬೇಕು, ಯಾರನ್ನು ಮುಟ್ಟಬಾರದು ಎನ್ನುವಂಥ ವಿವೇಚನೆ ಸರ್ಕಾರಕ್ಕೆ ಇರಬೇಕು.

ಶ್ರೀ ಬಿ. ರಮಾನಾಥ ರೈ:– ಆ ವಿವೇಚನೆ ಸರ್ಕಾರಕ್ಕೆ ಇದೆ. ನೋಡಿ ಒಂದು ನನ್ನ ಊರಿನಲ್ಲಿ ನನ್ನ ತಂದೆ ಹೇಳುತ್ತಿದ್ದರು. ಒಂದು ಗ್ರಾಮದಲ್ಲಿ

ಪಟ್ಟಾದಾರರು 5 ಜನ ಇದ್ದರು. ಇಡೀ ಒಂದು ಪಟ್ಟಾದಾರರು ಎಂದು 5 ಜನ ನಮ್ಮ ಊರಿನಲ್ಲಿ ಇದ್ದರು. ಅದೇ ಊರಿನಲ್ಲಿ 2,000 ಜನ ಇದ್ದಾರೆ. 10 ಜನಕ್ಕೆ ಹಕ್ಕು ಬಂದಿದ್ದು ಹೇಗೆ? ಪಟ್ಟಾ ಬಂದಿದ್ದು ಹೇಗೆ? ಆಕಾಶದಿಂದ ಬಿದ್ದದ್ದು ಅಲ್ಲ. ಅದಕ್ಕೆ ಹಿಂದಿನ ಸರ್ಕಾರ ಮಾಡಿರುವಂಥ ಕಾನೂನು. ಅದನ್ನು ವಿರೋಧ ಮಾಡುವಂಥ ವ್ಯವಸ್ಥೆ ಸಹ ಇತ್ತು. ಭೂ ವ್ಯವಸ್ಥೆ ಕಾನೂನು ಬಹಳ ಸುಲಭವಾಗಿ ಜಾರಿಯಾಗಿಲ್ಲ. ಸಮಾಜದಲ್ಲಿ ಅದನ್ನು ವಿರೋಧಿಸುವ ವರ್ಗವೇ ಇತ್ತು. ಸಾಮಾಜಿಕವಾಗಿ ರಾಜ್ಯಕ್ಕಾಗಿ ವಿರೋಧ ಮಾಡಿದವರು ಇದ್ದಾರೆ. ಆದರೂ ಸಹ ಬಡವರಿಗೆ ನಿವೇಶನ ಕೊಡುವ ಕೆಲಸ ಸಾಕಷ್ಟು ಆಯಿತು. ಬಗರ್ ಹುಕುಂ ಸಾಗುವಳಿ ಸಾಕಷ್ಟು ಆಯಿತು. ಇದಿಷ್ಟು ಭೂಮಿ ಕೊಟ್ಟವರು ಯಾರು? ಈಗ ನಮ್ಮನ್ನು ಒಂದು ಆರೋಪಿ ಸ್ಥಾನದಲ್ಲಿರಿಸಿ, ಒಕ್ಕಲೆಬ್ಬಿಸುತ್ತಿದ್ದಾರೆ ಎಂದ ಹೇಳುತ್ತಿದ್ದಾರೆ. ಗೇಣಿದಾರರಿಗೆ ಭೂಮಿ ಕೊಟ್ಟವರು ಯಾರು ಎಂಬುದನ್ನು ಮೊದಲು ನೀವು ತಿಳಿದುಕೊಳ್ಳಿ.

ಶ್ರೀ ಬಿ.ಬಿ. ನಿಂಗಯ್ಯ:– ಸನ್ಮಾನ್ಯ ಅಧ್ಯಕ್ಷರೆ, ಈಗ ಗಂಭೀರವಾಗಿ ಇದನ್ನು ಚರ್ಚೆ ಮಾಡುತ್ತಿರುವಂಥ ಸಂದರ್ಭದಲ್ಲಿ ಮಧ್ಯದಲ್ಲಿ ಅಲ್ಲಲ್ಲಿ ಎದ್ದು ಮಾತನಾಡಿದರೆ ತೊಂದರೆಯಾಗುತ್ತದೆ.

ಶ್ರೀ ಬಿ. ರಮಾನಾಥ ರೈ:– ನಮ್ಮ ಜಿಲ್ಲೆಯಲ್ಲಿ ವಿರೋಧ ಮಾಡುವ ಸಂಘಟನೆಗಳು ಯಾವುದು ಎಂದು ಹೇಳುತ್ತೇನೆ.

ಶ್ರೀ ವೈ.ಎಸ್.ವಿ. ದತ್ತಾ:– ಭೂ ಸುಧಾರಣಾ ಕಾಯಿದೆ ವಿಧೇಯಕ ಈ ವಿಧಾನಸಭೆಯಲ್ಲಿ ಮಂಡನೆಯಾದಾಗ ಯಾರೂ ವಿರೋಧ ಮಾಡಿಲ್ಲ. ನಾನು ಅದರ proceedings ತಂದಿಡುತ್ತೇನೆ. ಸರ್ವಾನುಮತದಿಂದ ತೀರ್ಮಾನವಾಗಿದೆ.

ಶ್ರೀ ಬಿ. ರಮಾನಾಥ ರೈ:– ಇಲ್ಲ, ನಮ್ಮ ಜಿಲ್ಲೆಯಲ್ಲಿ physically ಇವರೆಲ್ಲಾ ವಿರೋಧ ಮಾಡಿದ್ದಾರೆ.

ಶ್ರೀ ವೈ.ಎಸ್.ವಿ. ದತ್ತಾ:– ನಿಮ್ಮ ಜಿಲ್ಲೆ ಇರಬಹುದು, ಸದನದಲ್ಲಿ ಎರಡೂ ಕಡೆಯೂ ಸಹ ದೇವರಾಜ ಅರಸುರವರ ಕ್ರಾಂತಿಕಾರಿ

ಮಸೂದೆಯನ್ನು ಸದನ ಸರ್ವಾನುಮತದಿಂದ ತೀರ್ಮಾನ ಮಾಡಿದೆ. ಯಾರೂ ಸಹ ಅದಕ್ಕೆ ವಿರೋಧ ಮಾಡಿಲ್ಲ.

ಅಧ್ಯಕ್ಷರು:– ಭೂ ಸುಧಾರಣೆ ಕಾನೂನಿನ 14ನೇ ಸೆಕ್ಷನ್‌ನ್ನು Joint Selection Committee ಬಂದಾಗ ನಾನು ಮೈಸೂರಿನಲ್ಲಿ withdraw ಮಾಡಿಸಿದೆ. ಕಡೆಗೆ, ಇದು ತಪ್ಪು, ಆ ರೀತಿ ಮಾಡುವುದಕ್ಕೆ ಬರುವುದಿಲ್ಲ, ಬಿಲ್ ಆಗಿರುವುದನ್ನು ಹೇಗೆ ಮಾಡಿದಿರಿ ಎಂದು ಭಾರಿ ಚರ್ಚೆ ಆಯಿತು. ಇಲ್ಲಿ ಹನುಮಂತಪ್ಪನವರು ಎನ್ನುವವರು ಕುಳಿತಿದ್ದರು. ಕಡೆಗೆ ಒಂದು ಮಾತನ್ನು ಹೇಳಿದರು. ಒಂದು ಬಾರಿ ಕಮಿಟಿಯಲ್ಲಿ ತೀರ್ಮಾನ ಮಾಡಿದ ಮೇಲೆ ಬದಲಾವಣೆ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದ ಮೇಲೆ 14ನೇ ಸೆಕ್ಷನ್ ಇದ್ದದ್ದು ಹೋದ ನಂತರವೇ ನಮಗೆಲ್ಲಾ ಹಕ್ಕುಪತ್ರ ಸಿಕ್ಕಿದ್ದು. ಆಗ ಯಾರ್‍ಯಾರು ಇದ್ದರು ಎನ್ನುವುದು ನಿಮಗೆ ಗೊತ್ತಿದೆಯೇ?

ಶ್ರೀ ಬಿ.ಬಿ. ನಿಂಗಯ್ಯ:– ನಾವಂತೂ ಇರಲಿಲ್ಲ.

ಶ್ರೀ ವೈ.ಎಸ್.ವಿ. ದತ್ತಾ:– ಈ ಕಡೆ ಯಾರ್‍ಯಾರು ಕುಳಿತಿದ್ದರು, ಆ ಕಡೆ ಯಾರ್‍ಯಾರು ಕುಳಿತಿದ್ದರು ಎನ್ನುವುದು ಗೊತ್ತಿದೆ. ತಾವು ವಿರೋಧ ಪಕ್ಷದ ಕಡೆಯಲ್ಲಿದ್ದಿರಿ.

ಶ್ರೀ ಕೆ.ಆರ್. ರಮೇಶ್‌ಕುಮಾರ್:– ಮಾನ್ಯ ಅಧ್ಯಕ್ಷರೆ, ತಾವು socialist party ಯಿಂದ ಬಂದಿದ್ದಿರಿ, ನಾವು ಆಗ ಸದನಕ್ಕೆ ಬಂದಿರಲಿಲ್ಲ. ಕಾಂಗ್ರೆಸ್‌ನ ಒಳಗೂ, ಕಾಂಗ್ರೆಸ್‌ನ ಹೊರಗೂ ಭೂ ಸುಧಾರಣೆಯನ್ನು ತಮ್ಮ ಶಕ್ತಿ ಮೀರಿ ವಿರೋಧ ಮಾಡಿದವರು ಇದ್ದರು.

ಅಧ್ಯಕ್ಷರು:– ಹೌದು.

ಶ್ರೀ ಕೆ.ಆರ್. ರಮೇಶ್‌ಕುಮಾರ್:– ಆದರೆ, ಬಹಿರಂಗವಾಗಿ ವಿರೋಧ ಮಾಡುವ ಧೈರ್ಯ ಇರಲಿಲ್ಲ. Joint Select Committee ಯನ್ನು ಮಾಡಿ ದಿವಂಗತ ಎಂ.ಎಸ್. ಕೃಷ್ಣನ್‌ರವರು, ಕಕ್ಕಿಲಾಯರವರು, ಕಾಗೋಡು ತಿಮ್ಮಪ್ಪನವರು, ಭೈರೇಗೌಡರು, ಯಾರ್‍ಯಾರು ಇದರ ಪರವಾಗಿದ್ದರೋ ಇಂಥವರನ್ನು ಹೆಚ್ಚಾಗಿ ಅದರಲ್ಲಿ ತುಂಬಬೇಕಾಯಿತು. ದೇವರಾಜ

ಅರಸುರವರ ವಿರುದ್ಧ ಉಮಾಶಂಕರ್ ದೀಕ್ಷಿತ್‌ರವರ ಮುಖಾಂತರ ಇಂದಿರಾಗಾಂಧಿಯವರು complaint ತೆಗೆದುಕೊಂಡು ಹೋದರು. ಇದು ಬ್ರಾಹ್ಮಣರನ್ನು ಸರ್ವನಾಶ ಮಾಡುವುದಕ್ಕೆ ಈ ಮನುಷ್ಯ ಮಾಡುತ್ತಿದ್ದಾನೆ, ಅದಕ್ಕೆ ಶೃಂಗೇರಿ ಮಠ ಹೋಗಿಬಿಡುತ್ತದೆಂದು ಹೇಳಿದರು. ಅವರು ಸರಿಯಾಗಿ ಅರ್ಥ ಮಾಡಿಕೊಳ್ಳದೆ ಇಂದಿರಾಗಾಂಧಿಯವರು complaint ತೆಗೆದುಕೊಂಡು ಹೋದರು. Stall ಎಂದು ಒಂದು ಸ್ಟೇಜ್‌ನಲ್ಲಿ ಹೇಳಿಬಿಟ್ಟರು. ಮೋಹನ್‌ಕುಮಾರ್ ಮಂಗಳಂ, ಹೇಮಾವತಿ ನಂದನ್ ಬಹುಗುಣ, ಕೆ.ವಿ. ರಘುನಾಥರೆಡ್ಡಿ, ಚಂದ್ರಜಿತ್ ಯಾದವ್, ಇವರೆಲ್ಲರೂ ಸಹ ಕಾಂಗ್ರೆಸ್‌ನಲ್ಲೇ ಇದ್ದಂಥ ಮುಖಂಡರುಗಳು. ನಾನು ಆಗ ರಾಜ್ಯ ಯುವ ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿಯಾಗಿದ್ದೆ. ಆಗ ರಾಜ್ಯಕ್ಕೆಲ್ಲಾ ಇಬ್ಬರೇ ಪ್ರಧಾನ ಕಾರ್ಯದರ್ಶಿ ಇದ್ದರು. ನಾನು ಒಂದು delegation ತೆಗೆದುಕೊಂಡು ಹೋಗಿ ಅಲ್ಲಿ ಬಾಗಿಲು ಬಾಗಿಲಿಗೂ ಮೀಟ್ ಮಾಡಿ ಇಲ್ಲಿ ಮೋಹನ್‌ಕುಮಾರ್ ಮಂಗಳಂರವರನ್ನು ಇಂದಿರಾಗಾಂಧಿಯವರು ಕಳುಹಿಸುವಂತೆ ಮಾಡಿ ಆಗ ಕಂದಾಯ ಸಚಿವರಾಗಿದ್ದ ಹುಚ್ಚಮಾಸ್ತಿಗೌಡರವರ ಮನೆ ಮುಂದೆ ನಾವು youth congress ನವರು ಉಪವಾಸ ಸತ್ಯಾಗ್ರಹ ಕುಳಿತಿದ್ದೆವು. ನಮ್ಮನ್ನು ರಾಜೀ ಸಂಧಾನಕ್ಕೆ ಕರೆಸಿದಂತೆ ಮಾಡಿ ಬುದ್ಧಿವಂತಿಕೆ ಮಾಡಿ ದೇವರಾಜ ಅರಸುರವರು ಮಾಡಿಸಿದರು. ಈ ಸದನದಲ್ಲಿ ಸರ್ವಾನುಮತದಿಂದ ಆಯಿತು ಎಂದು ನೀವು ಹೇಳಿದಿರಿ. ಬಹಿರಂಗವಾಗಿ ವಿರೋಧ ಮಾಡುವುದಕ್ಕೆ ಧೈರ್ಯ ಇಲ್ಲದೇ ಇದ್ದಂಥವರು ಸಹ ಒಳಗಿಂದ ತಮ್ಮ ಪ್ರಯತ್ನಗಳೆಲ್ಲವನ್ನೂ ಮಾಡಿದರು. It's a popular programme. ಅದೊಂದೇ ಎಂದು ಅಲ್ಲ, ಅಂಥ ಕಾರ್ಯಕ್ರಮ ಯಾವುದೇ ಬಂದರೂ ಸಹ ಸ್ಥಾಪಿತ ಹಿತಾಸಕ್ತಿಗಳ ವಿರೋಧ ಮಾಡುವಂಥವರು ಬಹಿರಂಗವಾಗುವುದಿಲ್ಲ. ಒಳಗಡೆಯಿಂದ sabotage ಮಾಡುವಂಥ ಎಲ್ಲಾ ಕೆಲಸವನ್ನೂ ಮಾಡುತ್ತಾರೆ. Success ಆದರೆ ಮುರೀತು ಎಂದು ಖುಷಿ ಪಡುತ್ತಾರೆ. ಅವರು sabotage ಮಾಡುವಂಥ Plans fail ಆದಾಗ ನಾವು ಸಹ support ಮಾಡಿದ್ದೇವೆಂದು ಹೇಳಿ ಕೀರ್ತಿ ತೆಗೆದುಕೊಳ್ಳುವುದಕ್ಕೆ try ಮಾಡುತ್ತಾರೆ. ದೇವರಾಜ ಅರಸುರವರಿಗೆ ಎಷ್ಟು

ಚಾರಿತ್ರ್ಯವಧೆಯಾಯಿತು ಎಂದರೆ ನೀವು ಯೋಚನೆ ಮಾಡುವುದಕ್ಕೇ ಸಾಧ್ಯವಿಲ್ಲ.

ಅಧ್ಯಕ್ಷರು:– ಅವರನ್ನು ತೆಗೆಯಬೇಕಾಗಿತ್ತಲ್ಲ, ಕುಳಿತಿದ್ದರು.

ಶ್ರೀ ಕೆ.ಆರ್. ರಮೇಶ್ ಕುಮಾರ್:– ಮಾನ್ಯ ಅಧ್ಯಕ್ಷರೆ, ಅವರು ಒಂದು ಮಾತನ್ನು ಹೇಳಿದರು. ರಮಾನಾಥ ರೈ ಯವರು ಏನೇ ಹೇಳಿರಲಿ. ಯಾರು ಇದನ್ನು ತಂದರು ಎಂದು. Yes, they have a right to claim that. ದಕ್ಷಿಣ ಕನ್ನಡದಲ್ಲಿ ಭಾಸ್ಕರ್ ಸೇಮಿತಾ ಎಂಬುವವರ ಕೊಲೆಯಾಯಿತು. ಆ ಕೇಸಿನಲ್ಲಿ ಸುಬ್ಬಯ್ಯ ಶೆಟ್ಟರನ್ನು ಅಪರಾಧಿ ಮಾಡುವ ಪ್ರಯತ್ನ ಮಾಡಿದರು. ನಾಗೋರಿ ಕೊಲೆ ಪ್ರಕರಣ ಬಂತು. ಅದರಲ್ಲಿ ಸೇರಿಸುವ ಪ್ರಯತ್ನ ಮಾಡಿದರು. ಸುಬ್ಬಯ್ಯ ಶೆಟ್ಟರ್ ಒಬ್ಬರು ಮಂತ್ರಿಯಾಗಿದ್ದುಕೊಂಡು ಆ ತುಂಡು ಪಂಚೆಯನ್ನು ಮೇಲೆ ಕಟ್ಟಿಕೊಂಡು ಬೀದಿ–ಬೀದಿಗೆ, ಮನೆ–ಮನೆಗೆ ಹೋಗಿ Form – 7 file ಮಾಡಿಸಿದರು. ಇದೊಂದು ದೊಡ್ಡ ಹೋರಾಟವಾಗಿ ನಡೆದಿದೆ. ಸುಮ್ಮನೆ ಏನೂ ಆಗಿಲ್ಲ.

ಅಧ್ಯಕ್ಷರು:– ಅವರು Joint Select Committee ಯಲ್ಲಿದ್ದರು.

ಶ್ರೀ ಕೆ.ಆರ್. ರಮೇಶ್ ಕುಮಾರ್:– ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಆಗಿನಿಂದ ಅಧ್ಯಕ್ಷರೆ ತಾವು ಕೂಡಾ ಹೇಳುತ್ತಿದ್ದೀರಿ. ನಾವಿಲ್ಲಿ LH ಕಟ್ಟಬೇಕಾಗಿದ್ದರೆ Extension ಮಾಡಬೇಕಾದರೆ ದೇವೇಗೌಡರು ಪ್ರಧಾನ ಮಂತ್ರಿಯಾಗಿ ಹೋಗಿದ್ದರು. ಪಟೇಲರು ಮುಖ್ಯಮಂತ್ರಿಯಾಗಿ ಇಲ್ಲಿ ಕುಳಿತಿದ್ದರು. ನಾಣಯ್ಯ ನವರು Law Minister. ದಿವಂಗತ ನಂಜೇಗೌಡರು, ವಾಟಾಳ್ ನಾಗರಾಜ್, ಯಡಿಯೂರಪ್ಪನವರು, ಮಲ್ಲಿಕಾರ್ಜುನ ಖರ್ಗೆಯವರು ಎಲ್ಲಾ ಆ ಕಡೆ ಇದ್ದರು. ನಾನು ತಮ್ಮ ಸ್ಥಾನದಲ್ಲಿ ಕುಳಿತಿದ್ದೆ. ಒಂದು Public Interest Petition ಹಾಕಿದರು. ಅದೆಲ್ಲಾ ಕಬ್ಬನ್ ಪಾರ್ಕ್, ಈಗ ನಾವಿದ್ದೇವಲ್ಲ, ಚಾಲುಕ್ಯ ಆ ಮೂಲೆಯಲ್ಲಿ ಅದಕ್ಕೆ ಹುಡುಗರು ಎಂದರೆ ಸ್ಕೂಲ್ ಮಕ್ಕಳು ಬಂದು protest ಮಾಡಿದರು. ಕಬ್ಬನ್‌ಪಾರ್ಕಿನಲ್ಲಿ LH ಕಟ್ಟುತ್ತಿದ್ದಾರೆಂದು. ಸಾರ್ವಜನಿಕವಾಗಿ ಏನು ಅಭಿಪ್ರಾಯ ಕೊಟ್ಟರೆಂದರೆ ಕಬ್ಬನ್‌ಪಾರ್ಕ್ ಮಧ್ಯದಲ್ಲಿ ನಾವು ಹೋಗಿ LH ಕಟ್ಟುತ್ತೇವೆಂದು. ಅಲ್ಲಿ

ಕಟ್ಟಿರುವುದು Lawn Tennis Stadium. ಮಧ್ಯೆ ಹೈಕೋರ್ಟ್, ಡಿ.ಜಿ.ಪಿ ಆಫೀಸ್, ಪೋಸ್ಟ್ ಆಫೀಸ್ ಅವರು ಯಾರೂ ಕಬ್ಬನ್ ಪಾರ್ಕ್ ಮಧ್ಯ ಹೋಗಲಿಲ್ಲ. ನಮ್ಮನ್ನು ಜನ ವಿರೋಧಿಗಳೆಂದು ಮಾಡುವ ಪ್ರಯತ್ನ ಮಾಡಿದರು. ಕೊನೆಗೆ ಏನು ಮಾಡಿದರೆಂದರೆ, ನಾವು ಇಲ್ಲಿ ಏನೋ ಮಾತನಾಡಿದೆವೆಂದು ನಮ್ಮ ಮೇಲೆ petition ಹಾಕಿದರು. ನಮ್ಮನ್ನೆಲ್ಲಾ ಪಾರ್ಟಿ ಮಾಡಿ. ಖರ್ಗೆಯವರು ನನ್ನ ರೂಮಿನಲ್ಲಿ ಬಂದು ಕುಳಿತು ತಮಾಷೆ ಮಾಡಿ ಹೇಳಿದರು. ನಮಗೆಲ್ಲಾ ನೋಟೀಸ್ ಬರುತ್ತದೆ, ಅರೆಸ್ಟ್ ಮಾಡುತ್ತಾರೆ. ಇದೇ ಸದನದಲ್ಲಿ ನಾನು ಹೇಳಿದೆ, get the records. ಅವರ ನೋಟೀಸ್ ನಮಗೆ ಬಂದರೆ ಈ House contempt ಮಾಡುತ್ತಾರೆಂದು ನನ್ನ ನೋಟೀಸ್ ಅವರ ಬಾಗಿಲಿನಲ್ಲಿ ಇರುತ್ತದೆ. ಈಗಲೂ ನಾನು ತಮ್ಮಲ್ಲಿ ಇಷ್ಟೇ ವಿನಂತಿ ಮಾಡಿಕೊಳ್ಳುತ್ತೇನೆ. ಈ ಸದನಕ್ಕೆ ಆ ಶಕ್ತಿ ಇದೆ. ಯಾರು ಈ ಸದನದ ಆದೇಶವನ್ನು ಉಲ್ಲಂಘನೆ ಮಾಡುತ್ತಾರೆ, ಈ ಸದನದಲ್ಲಿ ಆದ ಶಾಸನವನ್ನು ಉಲ್ಲಂಘನೆ ಮಾಡುತ್ತಾರೆ, ಜನಪರವಾದ ಕಾನೂನುಗಳನ್ನು ಉಲ್ಲಂಘನೆ ಮಾಡುತ್ತಾರೆ, ಒಂದು ಬಾರಿ ಅವರಿಗೆ ರುಚಿ ತೋರಿಸಬೇಕಾಗುತ್ತದೆ. ಅವರಿಗೆ ತಾವು ಬಾರ್ ಹಾಕಬೇಕು. You will have to call them to the Bar of the House. You will have to admonish them or sentence them, then they will realize. ಸಂವಿಧಾನ ನಿಮಗೆ ಈ ಶಕ್ತಿಯನ್ನು ಕೊಟ್ಟಿದೆ. ಅದಕ್ಕೆ ನಾನು ಪದೇ ಪದೇ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಈ ಸದನದ ಸಾರ್ವಭೌಮತ್ವವನ್ನು ಸಂವಿಧಾನಬದ್ಧವಾಗಿ ನಮಗಿರುವ ಶಕ್ತಿಯನ್ನು ದುರುಪಯೋಗ ಮಾಡಿಕೊಳ್ಳುವ ಆಲೋಚನೆ ನಮಗೆ ಬರಬಾರದು. ಇದರ ಶಕ್ತಿಯನ್ನು ಕುಂದಿಸುವುದಕ್ಕೆ ನಾವು ಭಾಗಿಗಳಾಗಬಾರದು. ವಿವೇಚನಾಯುತವಾಗಿ, ಜವಾಬ್ದಾರಿಯುತವಾಗಿ ನಾವು ಪ್ರತಿ ಹಂತದಲ್ಲಿಯೂ ನಡೆದುಕೊಂಡರೆ this situation will not arise.

ಅಧ್ಯಕ್ಷರು:– Thank you.

ಶ್ರೀ ಬಿ.ಬಿ. ನಿಂಗಯ್ಯ:– ಮಾನ್ಯ ಅಧ್ಯಕ್ಷರೆ, ಮಾನ್ಯ ರಮೇಶ್ ಕುಮಾರ್ ರವರು ಹೇಳಿದಂತೆ ಅಂದು ನಾನೂ ಕೂಡಾ ಈ ಸದನದಲ್ಲಿ ಮಂತ್ರಿಯಾಗಿದ್ದೆ.

ಬಹಳ ಗಂಭೀರವಾದ ಚರ್ಚೆಯಾಗಿತ್ತು. ಇತಿಹಾಸದ ಭಾಗ ಅದು. ತಾವು ಹೇಳಿದ ಕಾಗೋಡು ಚಳುವಳಿ ಮತ್ತು ದೇವರಾಜ್ ಅರಸು ಅವರನ್ನು ನೆನೆಸಿಕೊಳ್ಳುವುದು ನಾವು ಮರೆತರೆ ನಮಗೆ ಯಾರಿಗೂ ಒಳ್ಳೆಯದಾಗುವುದಿಲ್ಲ. ಅವರು ಅಧಿಕಾರದಲ್ಲಿದ್ದಾಗ ಬಡವರ ಪರವಾಗಿ ಅಂತಹ ದೊಡ್ಡ ಹೋರಾಟವನ್ನು ಮಾಡಿ ನ್ಯಾಯ ದೊರಕಿಸಿಕೊಟ್ಟಿದ್ದಾರೆ. ಅವರನ್ನು "ಸಾಮಾಜಿಕ ನ್ಯಾಯದ ಹರಿಕಾರ" ಎಂದು ಹೇಳಿದರೆ ತಪ್ಪಾಗಲಾರದು. ಸಂವಿಧಾನದ ನಿರ್ಮಾಪಕರು ಅವರು. ಅವರೇನು ಹೇಳಿದ್ದರು, ಸಾಮಾಜಿಕ ನ್ಯಾಯವನ್ನು ಕೊಡುವ ಕೆಲಸವನ್ನು ಅರಸು ಇದ್ದಾಗ ಇಲ್ಲಿ ಕೊಟ್ಟಿದ್ದಾರೆ. ಅದನ್ನು ಸ್ಮರಿಸಬೇಕಾದ್ದು ನಮ್ಮ ಧರ್ಮ. ಅದನ್ನು ನಾನು endorse ಮಾಡುತ್ತಾ, ಇಂದು ನಾನು ಹೇಳುತ್ತಿದ್ದೆ. ಒಂದು ವರದಿ ಇಡೀ ರಾಜ್ಯದ ನಿದ್ದೆಗೆಡಿಸಿದೆ. ಅದನ್ನು ಮೊನ್ನೆ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡುತ್ತಾ, ಸರ್ಕಾರ ಸ್ಪಷ್ಟವಾಗಿ ಹೇಳಲಿಲ್ಲ. 'ಕಳೆದ ಹಿಂದಿನ ವಿಧಾನಸಭೆಯಲ್ಲಿ ಚರ್ಚೆಯಾಗುತ್ತಾ, ಸದನದಲ್ಲಿ ಇಲ್ಲ, ನಾವು ವರದಿಯ ಬಗ್ಗೆ ಏನೂ ತೀರ್ಮಾನ ತೆಗೆದುಕೊಂಡಿಲ್ಲ ಎಂದು ಸರ್ಕಾರ ಹೇಳಲಿಲ್ಲ. ಆದರೆ, ಬಹುಶಃ ಆಗಸ್ಟ್ ತಿಂಗಳಿನಲ್ಲಿ ಎಂದು ಕಾಣುತ್ತದೆ. ವಿರೋಧ ಪಕ್ಷದ ನಾಯಕರು ಹೇಳಿದರು. ಬಾಲಸುಬ್ರಮಣ್ಯಂ ವರದಿಯ ಬಗ್ಗೆ ನಿಮ್ಮ ಅಭಿಪ್ರಾಯ ಏನು ಎಂದು ಕೋರ್ಟ್ ಕೇಳುತ್ತದೆ. ನಾವು ಅದನ್ನು ತೆರವುಗೊಳಿಸುತ್ತೇವೆಂದು ಸರ್ಕಾರ ಹೇಳುತ್ತದೆ. Affidavit ನಲ್ಲಿ ತೆರವುಗೊಳಿಸುತ್ತೇವೆಂದು ಹೇಳಿದೆ. ಮೊನ್ನೆ ತಮ್ಮ ಎದುರಿಗೆ ವಿರೋಧ ಪಕ್ಷದ ನಾಯಕರು. . .

ಅಧ್ಯಕ್ಷರು:– ಬಾಲಸುಬ್ರಮಣ್ಯಂ ವರದಿಯ ಬಗ್ಗೆ ಹೇಳಿದ್ದಾರೆ?

ಶ್ರೀ ಸಿ.ಟಿ. ರವಿ:– ಮಾನ್ಯ ಅಧ್ಯಕ್ಷರೆ, ಬಾಲಸುಬ್ರಮಣ್ಯಂ ವರದಿ implement ಮಾಡಬೇಕು, ಒತ್ತುವರಿಯಾಗಿರುವುದನ್ನು ತೆರವುಗೊಳಿಸಬೇಕು ಎಂದು ಹಿರೇಮಠ ರವರು ಹಾಕಿದ ಕೇಸು. ಅದನ್ನು ಬಾಲಸುಬ್ರಮಣ್ಯಂ ವರದಿ ವೈಜ್ಞಾನಿಕವಾಗಿಲ್ಲ, ಕ್ರಮಬದ್ಧವಾಗಿಲ್ಲ ಎಂದು ಒಂದು ಶಬ್ದದಲ್ಲಿ ಹೇಳಿದ್ದರೆ ಇವತ್ತು ಈ ನೋಟೀಸ್ ಪ್ರಶ್ನೆಯೇ ಉದ್ಭವವಾಗುತ್ತಿರಲಿಲ್ಲ.

ಅಧ್ಯಕ್ಷರು:– ಅದು ಹಾಗಲ್ಲ. ಸುಮ್ಮನಿರಿ ನಾನು ಹೇಳುತ್ತೇನೆ. ಅದು ನನಗೂ ಬೇಕಾಗಿದೆ. ಬಾಲಸುಬ್ರಮಣ್ಯಂ ರವರ ವರದಿಯನ್ನು ಸರ್ಕಾರ ಒಪ್ಪಿದೆ ಎಂಬ ಪದವನ್ನು ಸರ್ಕಾರ ಬಳಸಿದ್ದಾರಾ? ಇಲ್ಲವಾದರೆ ಬಿಡಿ ಮತ್ತೆ.

ಶ್ರೀ ಬಿ.ಬಿ. ನಿಂಗಯ್ಯ:– ಸರ್ ಒಂದು ನಿಮಿಷ.

ಶ್ರೀ ಕೆ.ಆರ್. ರಮೇಶ್ ಕುಮಾರ್:– They are right. ತಾವು ದಯವಿಟ್ಟು ಅರ್ಥ ಮಾಡಿಕೊಳ್ಳಿ. ಬಾಲಸುಬ್ರಣ್ಯಂ ವರದಿಯನ್ನು ಒಪ್ಪಿದೆಯೆ, ಒಪ್ಪಲಿಲ್ಲವೆ ಎನ್ನುವ ಮಾತನ್ನು ಹಿಂದಿನ ಸರ್ಕಾರವೂ ಹೇಳಿಲ್ಲ, ಈಗಿನ ಸರ್ಕಾರವೂ ಹೇಳಲಿಲ್ಲ. ಬಾಲಸುಬ್ರಮಣ್ಯಂ ವರದಿಯನ್ನು ಅನುಷ್ಠಾನಗೊಳಿಸಬೇಕೆಂದು ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯನ್ನು ಹೈಕೋರ್ಟಿನಲ್ಲಿ ಸಲ್ಲಿಕೆ ಮಾಡಿದಾಗ ಈ ರಾಜ್ಯ ಸರ್ಕಾರದವರು ಈಗ ಆಡಳಿತ ನಡೆಸುತ್ತಿರುವ ಸರ್ಕಾರದವರೂ ಕೂಡಾ ಒಂದು affidavit ಅನ್ನು file ಮಾಡಿದರು. Evictions ಮಾಡಿಸುತ್ತೇವೆಂದು ಹೇಳಿದರು. What does that mean?

ಶ್ರೀ ಬಿ.ಬಿ. ನಿಂಗಯ್ಯ:– ಸರ್ಕಾರ indirect ಆಗಿ ಒಪ್ಪಿಕೊಂಡಿರುವುದು.

ಶ್ರೀ ಕೆ.ಆರ್. ರಮೇಶ್ ಕುಮಾರ್:– ಅಂದರೆ, we have accepted that report ಎಂದು.

ಅಧ್ಯಕ್ಷರು:– ಅದಕ್ಕೆ ಈ ಚರ್ಚೆ ನಡೆಯುತ್ತಿರುವುದು. ಅದನ್ನು ಇಟ್ಟು ಹೇಳಿ. ನನ್ನ ಬಳಿಯೂ ಇದೆ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೆ, ಸುಬ್ರಮಣ್ಯಂ ವರದಿ ಆಗುವುದಿಲ್ಲವೆಂದು file ಆಗಿದೆ. ಅದನ್ನು implement ಮಾಡಿ ಎಂದು ಹೇಳಿ. ಇವರು implement ಮಾಡುತ್ತೇವೆಂದು affidavit ಕೊಟ್ಟಿದ್ದಾರೆ. ನಾನು ಹೇಳಿದ್ದು ಅದನ್ನೆ.

ಶ್ರೀ ವೈ.ಎಸ್.ವಿ. ದತ್ತಾ:– ಮಾನ್ಯ ಅಧ್ಯಕ್ಷರೆ, Learned Principal Government Advocate assured the Court that keeping these observations in mind, (ಅದೇ 5 ಎಕರೆಯದು), the drive for recovery

of Government land will be intensified and all the District Level Committee will be suitably instructed to quicken the place of recovery of Governmental Forest Land by concentrating on the cases, in which more than 5 acres of land are under encroachment by 140 or more persons of the same grove.

ಅಧ್ಯಕ್ಷರು:– ಯಾರು?

ಶ್ರೀ ವೈ.ಎಸ್.ವಿ. ದತ್ತಾ:– High Court observations.

ಅಧ್ಯಕ್ಷರು:– ಅವರನ್ನು ಬಿಡಿ.

ಶ್ರೀ ಕೆ.ಜಿ. ಬೋಪಯ್ಯ:– ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು:– ಬೋಪಯ್ಯನವರೆ ನಾನು ಹೇಳುವುದನ್ನು ಕೇಳಿ.

ಶ್ರೀ ಕೆ.ಜಿ. ಬೋಪಯ್ಯ:– Affidavit ನಲ್ಲಿ ಏನು ಹೇಳಿದ್ದಾರೆಂದು ಹೇಳುತ್ತಿದ್ದೇನೆ.

ಅಧ್ಯಕ್ಷರು:– ಅದನ್ನು ಹೇಳಿ.

ಶ್ರೀ ಕೆ.ಜಿ. ಬೋಪಯ್ಯ:– ಇದನ್ನು 12 .08 ಗೆ file ಮಾಡಿರುವುದು. 6 & 7 ಓದಿಬಿಡುತ್ತೇನೆ. It is submitted that as rightly observed by the Hon'ble Court that the process of removal of encroachment is not happening at the expected rate. The main reason as expressed by the Deputy commissioner or due to the elections in the past 2-3 months and issue of income certificate and caste certificates to the students as the Field Officers of the Department were fully involved in the process. It is submitted that the Government is keen taking action for removal of encroachment. As a matter of fact, the Government has already constituted District Level Authority, Taluk Level Authority, besides the State Authority under the chairmanship of Hon'ble

Minister for Revenue vide G.O. No.RD/88/LGQ/P1 dated 13.11.2008 to follow up the process of removal of encroachment. Further, these authorities have been sensitized by Chief Secretary to the Government by ıssuing ınstructions on 05.08.2004, Annexure R-1 to this affıdavit. The progress achieved is awaited.

ಅಧ್ಯಕ್ಷರು:– ಬೋಪಯ್ಯನವರೆ ನಾನು ಒಂದು ಮಾತನ್ನು ಹೇಳುತ್ತೇನೆ. ಈಗ ಅದರಲ್ಲಿ ಫಾರಂ ನಂ. 50–50 ಹಾಕಿದರೆ ಅಥವಾ ಅರಣ್ಯ ಕಾಯಿದೆ ಪ್ರಕಾರ ಅರ್ಜಿಯನ್ನೂ ಹಾಕಿದ್ದರೆ ಅದನ್ನು eviction ಮಾಡಬೇಕೆಂದು ಎಲ್ಲಿಯೂ ಹೇಳಿಲ್ಲ.

ಶ್ರೀ ಕೆ.ಆರ್. ರಮೇಶ್ ಕುಮಾರ್:– ಮಾನ್ಯ ಅಧ್ಯಕ್ಷರೆ, ತಮ್ಮಲ್ಲಿ ಅತ್ಯಂತ ನಮ್ರತೆಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್:– ಅವರು ಹೇಳಬಹುದಿತ್ತು. ಇವೆಲ್ಲಾ ಇಷ್ಟು pending ಇದೆ ಎಂದು ಏನೂ ಹೇಳಿಲ್ಲ ಅವರು. Affıdavit ನಲ್ಲಿ ಏನೂ ಹೇಳಿಲ್ಲ ಸರ್.

ಶ್ರೀ ಕೆ.ಆರ್. ರಮೇಶ್ ಕುಮಾರ್:– ಜಗದೀಶ್ ಶೆಟ್ಟರ್ ರವರೆ ಸ್ವಲ್ಪ ಇರಿ. ಅವರು ಏನು ಮಾಡಿದರು. ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯನ್ನು ದಾಖಲು ಮಾಡಿದವರು ಎಂದೂ ನೇಗಿಲು ಉತ್ತರವಲ್ಲ. ಜಮೀನಿಗೂ ಅವರಿಗೂ ಸಂಬಂಧವಿಲ್ಲ. Locustandi ಇಲ್ಲದಿರುವ ಮನುಷ್ಯ ಆತ ಕೋರ್ಟಿಗೆ ಏನು ಚಿತ್ರಣ ಕೊಡುತ್ತಾನೆಂದರೆ, ಇದೆಲ್ಲಾ ಸಹಸ್ರಾರು ಕೋಟಿ ರೂ.ಗಳ ಒಡವೆ. ರೈತರಲ್ಲಾ ಸೇರಿ, ಕಳ್ಳರೆಲ್ಲಾ ಸೇರಿ ಲೂಟಿ ಹೊಡೆದು ಬಿಟ್ಟಿದ್ದಾರೆ. Encroachment ಎಂದರೆ ಅವನು ಕಳ್ಳ ಇದನ್ನು ಹೇಳಿದ ತಕ್ಷಣ, ಪಾಪ ಅವರು ನ್ಯಾಯ ಕಾಪಾಡುವವರಲ್ಲವೆ, ಅವರಿಗೂ ಬಿಡುವು ಇಲ್ಲ, ಅವರೂ ಜಮೀನಿನ ಬಳಿ ಹೋದವರು ಅಲ್ಲ. ಅವರೇನು ಹೇಳಿದರು. Yes, ಈ ಕಳ್ಳರನ್ನೆಲ್ಲಾ ಹಿಡಿಯಬೇಕೆಂದು ಅವರೂ ಹೇಳಿದರು. ಒಂದೇ ಒಂದು ನಿಮಿಷ ಸಹಕರಿಸಿ. PIL ಹಾಕಿದವರಿಗೆ ಜಮೀನು ಸಂಬಂಧವಿಲ್ಲ, Judgment ಕೊಟ್ಟವರಿಗೆ ಜಮೀನು ಸಂಬಂಧ ಇಲ್ಲ, affıdavit ಹಾಕಿದವರಿಗೂ ಜಮೀನು

ಸಂಬಂಧವಿಲ್ಲ. ಸಂಬಂಧ ಇರುವವನು ಇಲ್ಲಿ ಮಾತನಾಡುತ್ತಿದ್ದಾನೆ. ಏಕೆಂದರೆ ನಾವು ಅವರ ಮಧ್ಯೆ ಬದುಕಬೇಕಾಗಿದೆ. Affidavit ಇವರು ಹಾಕಬೇಕಾಗಿದ್ದರೆ ಬಾಲಸುಬ್ರಮಣ್ಯಂ ವರದಿ ಯಾವತ್ತು ಆಯಿತು, ಯಾರು constitute ಮಾಡಿದರು, ಏನು terms of reference ಇತ್ತು, ಆತ ಏನು ಹೇಳಿದ್ದಾನೆ, time ಬೇಕಾಗುತ್ತದೆ. ಇದೆಲ್ಲಾ ಏನೂ ಇಲ್ಲ. ಕೋರ್ಟಿನಲ್ಲಿ ಅವರು judges ಬಾಯಿಗೆ ಬಂದಂತೆ ಬೈಯ್ಯುತ್ತಾರೆ. ಅವರ ರಭಸಕ್ಕೆ ಹೆದರಿ ಇವರು affidavit file ಮಾಡಿ ಬಿಟ್ಟರು. ನಾನು ಅದಕ್ಕೆ ಹೇಳುವುದು. Supreme Court ಬಗ್ಗೆ ಕೂಡಾ ನಾನು ಹೇಳುತ್ತೇನೆ. It is supreme not because of it is infallible. There is no further appeal, therefore, it is final.

ಅಧ್ಯಕ್ಷರು:– O.K.

ಶ್ರೀ ಕೆ.ಆರ್. ರಮೇಶ್‌ಕುಮಾರ್:– ಮಾನ್ಯ ಅಧ್ಯಕ್ಷರೆ, ನಾನು ಕೃಷ್ಣಯ್ಯನವರಿಗೆ ಶೃದ್ಧಾಂಜಲಿ ಅರ್ಪಿಸಿ ಮಾತನಾಡುವಾಗ ಹೇಳಿದ್ದೇನೆ. Court only delivers judgment, it does not deliver justice. ಆದ್ದರಿಂದ ದಯಮಾಡಿ ಅರ್ಥ ಮಾಡಿಕೊಳ್ಳಿ. All of us I think, we will have to tell the Government. They must revise their stand.

ಅಧ್ಯಕ್ಷರು:– ಮಾನ್ಯ ಬೋಪಯ್ಯನವರೆ, ನೀವೂ ಲಾಯರ್ ಇದ್ದೀರಿ. 192(A) ಇಲ್ಲಿ ತರಿಸಿ ಇಟ್ಟುಕೊಂಡಿದ್ದೇನೆ.

ಶ್ರೀ ಕೆ.ಜಿ. ಬೋಪಯ್ಯ:– ನಾನು ಮೊನ್ನೆ ಮಾತನಾಡುವಾಗ preamble ಬಗ್ಗೆ ಹೇಳಿದ್ದೇನೆ.

ಅಧ್ಯಕ್ಷರು:– ಮಾಡಿರುವ ಒಂದು ತಪ್ಪಿಗಾಗಿ ಈ ಅನಾಹುತಕ್ಕೆ ಕಾರಣವಾಯಿತು.

ಶ್ರೀ ಕೆ.ಜಿ. ಬೋಪಯ್ಯ:– Preamble ಅಲ್ಲಿ ಬಹಳ clear ಆಗಿತ್ತು. ಅದಕ್ಕೋಸ್ಕರ ಅದನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಹೇಳಿದ್ದೇನೆ.

ಅಧ್ಯಕ್ಷರು:– ಯಾರೂ ಒಬ್ಬರೂ ಅದನ್ನು ಹೇಳಲಿಲ್ಲವಲ್ಲಾ?

ಶ್ರೀ ಕೆ.ಜಿ. ಬೋಪಯ್ಯ:– ಮೊನ್ನೆ ತಾವು ಇರಲಿಲ್ಲ, ಉಪಸಭಾಧ್ಯಕ್ಷರು ಇದ್ದರು ಆಗ ಹೇಳಿದ್ದೇನೆ.

ಅಧ್ಯಕ್ಷರು:– ಇವರು ಏನು ಹೇಳುತ್ತಾರೆ ನನಗೆ ಗೊತ್ತಿಲ್ಲ.

ಶ್ರೀ ಕೆ.ಜಿ. ಬೋಪಯ್ಯ:– ಮಾನ್ಯ ಉಪಸಭಾಧ್ಯಕ್ಷರು ಇದ್ದಾಗ ನಾನು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ:– ಅದನ್ನು ಡಿಲೀಟ್ ಮಾಡಿ ತಿದ್ದುಪಡಿ ಮಾಡಿ ಹಿಂತೆಗೆದುಕೊಳ್ಳಿ ಎಂದು ಹೇಳಿದ್ದೇವೆ.

ಶ್ರೀ ಕೆ.ಜಿ. ಬೋಪಯ್ಯ:– 192(A) preamble ನಲ್ಲಿ ಇದ್ದದ್ದನ್ನು ಮಾತ್ರ ಮಾಡಬೇಕು, main Act ಏನು ಮಾಡಿದ್ದಾರೆ, ಅದನ್ನು ವಾಪಸ್ ತೆಗೆದುಕೊಂಡು ಇದು ನಗರ ಪ್ರದೇಶಕ್ಕೆ ಸೀಮಿತ ಎಂದು ಹೇಳುವುದನ್ನು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ.

ಶ್ರೀ ಕೆ.ಆರ್. ರಮೇಶ್ ಕುಮಾರ್:– ನಗರ ಪ್ರದೇಶಗಳಲ್ಲಿ ಆಗಿರತಕ್ಕಂಥದ್ದನ್ನು ಬಿಟ್ಟು ಎಂದು ಸ್ಪಷ್ಟವಾಗಿ ಎಲ್ಲರೂ unanimous ಆಗಿ ಸದನದಲ್ಲಿ ಹೇಳಿ. It should be rejected ಎಂದು ಹೇಳಿ.

ಅಧ್ಯಕ್ಷರು:– ನಮ್ಮ Land Revenue Act ಇದೆ. ಅದರಲ್ಲಿ TT ಹಾಕುವುದಕ್ಕೂ ಅವಕಾಶ ಇದೆ, eviction ಮಾಡುವುದಕ್ಕೂ ಅವಕಾಶ ಇದೆ. ಈ Act ಹಿಂದೆ Land Revenue Manual ಇತ್ತು. ಈಗ Land Revenue Act ಬಂದಿದೆ. ಈ procedure ಇದ್ದೇ ಇದೆ. ಈಗ ಏನೋ ಆಕಾಶವೇ ಬಿದ್ದು ಹೋಗಿ ಬಿಟ್ಟಿದೆ ಎನ್ನುವ ಒಂದು ಭ್ರಮೆಯನ್ನು ಹುಟ್ಟಿಸುತ್ತಿದ್ದಾರಲ್ಲಾ, ಇದಕ್ಕೆ ಕಾರಣವೇನು? ನಮ್ಮ ಚುನಾಯಿತ ಪ್ರತಿನಿಧಿಗಳಲ್ಲಿರುವ ಇಚ್ಚಾಶಕ್ತಿಯ ಕೊರತೆಯ ಪರಿಣಾಮದಿಂದಾಗಿ ಆಗಿದೆ.

ಶ್ರೀ ಕೆ.ಜಿ. ಬೋಪಯ್ಯ:– ಮಾನ್ಯ ಅಧ್ಯಕ್ಷರೆ, Bangalore Foundation ಆ ರಾಜೀವ್ ಚಂದ್ರಶೇಖರ್ ಅವರು ನಗರಕ್ಕೆ ಸಂಬಂಧಪಟ್ಟ ಹಾಗೆ ಪಿಟಿಷನ್ ಹಾಕಿದ್ದು. ಆ ಮೇಲೆ ಹಿರೇಮಠ್‌ರವರು ಕೂಡ ನಾನು 10 ಎಕರೆ ಒಳಗೆ

ಕೇಳಲಿಲ್ಲವೆಂದು ಪತ್ರಿಕಾ ಹೇಳಿಕೆ ಕೊಟ್ಟಿದ್ದಾರೆ. ಅದನ್ನು ನೋಡಿಕೊಂಡು ಅಫಿಡವಿಟ್ ಹಾಕಿದ್ದರೆ ಏನೂ ಆಗುತ್ತಿರಲಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ಅಧ್ಯಕ್ಷರೆ, ಅಫಿಡವಿಟ್ ಹಾಕಿದ್ದು ಸರ್ಕಾರದ ಮಂತ್ರಿಗಳಿಗೂ ಗೊತ್ತಿಲ್ಲ ಎನ್ನುವುದು ನಮಗೆಲ್ಲಾ ಗೊತ್ತಿದೆ.

ಅಧ್ಯಕ್ಷರು:– ಅದನ್ನೇ ನೀವು ಮಾತನಾಡುವಾಗ ಹೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಈ ಅಫಿಡವಿಟ್ ಸರ್ಕಾರದ ಗಮನಕ್ಕೆ ಬಂದು ಸರ್ಕಾರ ಅಪ್ರೂವಲ್ ಕೊಟ್ಟು ಆಗಿದ್ದಲ್ಲ.

ಅಧ್ಯಕ್ಷರು:– ಅದನ್ನು ನೀವು ಹೇಳಿ ಉತ್ತರ ಹೇಳುತ್ತಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಅದಕ್ಕೆ A.G. ಯವರು Suo-moto ಅಧಿಕಾರಿಗಳ ಸಭೆ ಮಾಡಿ ಈ ಅಫಿಡವಿಟ್ ಅನ್ನು ಹೈಕೋರ್ಟಿಗೆ ಕೊಟ್ಟಿರುವುದರಿಂದ . . .

(ಗೊಂದಲ)

ಅಧ್ಯಕ್ಷರು:– ಕಾಗೇರಿಯವರೆ, ನಿಮ್ಮ ಭಾಷಣದಲ್ಲಿ ದಯವಿಟ್ಟು ಸದನದಲ್ಲಿ ಪ್ರಸ್ತಾಪ ಮಾಡಿ ಹೇಳಿ. ಅದಕ್ಕೆ specific ಆಗಿ ಉತ್ತರವನ್ನು ಪಡೆಯೋಣ. ಆ ಉತ್ತರವನ್ನು ಅವರು ಸರಿಯಾಗಿ ಹೇಳದೇ ಹೋದರೆ ಏನು ಮಾಡಬೇಕೆಂದು ಮುಂದೆ ನೋಡೋಣ. Let us have a discussion and then decide on merits.

ಶ್ರೀ ಬಿ.ಬಿ. ನಿಂಗಯ್ಯ:– ಮಾನ್ಯ ಅಧ್ಯಕ್ಷರೆ, ತಾವು ಹೇಳಿದ ಹಾಗೆ . . .

ಅಧ್ಯಕ್ಷರು:– ಎಲ್ಲಾ ಸದಸ್ಯರು ಖಾಲಿಯಾಗುತ್ತಿದ್ದಾರೆ. ಮಲೆನಾಡು ಕಡೆಯಿಂದ ಬಂದವರು ಯಾರ್ಯಾರಿದ್ದಾರೆ, ಪ್ರಸನ್ನ ಕುಮಾರ್ ಇಲ್ಲ, ಪ್ರಮೋದ್ ಇದ್ದಾರೆ. ಇದು ಒಂದು ಸಮಸ್ಯೆಯಿಂದ ಜನರನ್ನು ಪಾರು ಮಾಡಬೇಕಾದ ಅವಶ್ಯಕತೆ ಇದೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಈ ಸಮಸ್ಯೆ ಕೇವಲ ಮಲೆನಾಡಿನಲ್ಲಿ ಮಾತ್ರ ಇಲ್ಲ. ರಾಜ್ಯದ ಎಲ್ಲಾ ಕಡೆ ಇದೆ. ಎಲ್ಲಾ ಶಾಸಕರೂ ಇರಬೇಕು. ಅಸೆಂಬ್ಲಿಯಲ್ಲಿ ಕಾನೂನು ಮಾಡಿ ಬರುತ್ತೇವೆಂದು ಹೇಳಿ ಬಂದಿದ್ದೇವೆ. ಈ ಏನಾದರೂ ನಾವು ಹೋಗಿ ವರದಿ ಕೊಡಲಿಲ್ಲವೆಂದರೆ. . . ನಮ್ಮ ಕಡೆಯಿಂದ ನಾಲ್ಕೈದು ಸಾವಿರ ಜನ ಬರುತ್ತಾರೆ.

(ಗೊಂದಲ)

ಶ್ರೀ ಬಿ.ಬಿ. ನಿಂಗಯ್ಯ:– ಮಾನ್ಯ ಅಧ್ಯಕ್ಷರೆ, ಇದು ರಾಜ್ಯದ 30 ಜಿಲ್ಲೆಗಳಲ್ಲಿ ಕೂಡ ಈ ಒತ್ತುವರಿ ಸಮಸ್ಯೆ ಇದೆ. ಅದನ್ನು ಎಲ್ಲರಿಗೂ ಮಾತನಾಡುವುದಕ್ಕೆ ತಾವು ಅವಕಾಶ ಕೊಡಬೇಕು. ಇವತ್ತು ಈ ವಿಷಯ ಗಂಭೀರವಾಗಿ ಚರ್ಚೆಯಾಗುತ್ತಿದೆ, ಇದಕ್ಕೆ ಒಂದು ಅಂತ್ಯ ಹಾಡಬೇಕು. We must reach a logical end.

ಅಧ್ಯಕ್ಷರು:– ನೀವು ಅನುಭವಸ್ಥರಿದ್ದೀರಿ. ಈ ಸಮಸ್ಯೆಗೆ ಹೇಗೆ ಪರಿಹಾರ ಕೊಡಬಹುದೆಂಬ ಬಗ್ಗೆ ಹೇಳಿ. ಒಂದು eviction ನಿಲ್ಲಿಸುವುದು, ಯಾರಿಗೆ ಅರ್ಹತೆ ಇದೆ, ಅರ್ಜಿ ಇವೆ, ಅವರಿಗೆ ಏನು ಮಾಡಬೇಕು, ಅರ್ಹತೆ ಇದ್ದು ಅಕಸ್ಮಾತ್ ಹಿಂದೆ ಅರ್ಜಿ ಕೊಡದೆ ಇದ್ದರೆ ಅವರಿಗೆ ಏನು ಮಾಡಬೇಕೆಂದು specific ಆಗಿ issue-wise ಸರ್ಕಾರಕ್ಕೆ ಒಂದು issue formation ಆಗಬೇಕಾ ಅವರು ಉತ್ತರ ಕೊಡಬೇಕಾದರೆ, ಸುಮ್ಮನೆ ಎಲ್ಲ ಜನರಲೈಸ್ ಮಾಡಿಕೊಂಡು ಹೋದರೆ ಹೇಗೆ?

ಶ್ರೀ ಬಿ.ಬಿ. ನಿಂಗಯ್ಯ:– ಜನರಲೈಸ್ ಮಾಡುತ್ತಿಲ್ಲ. I am very specific. ಮಲೆನಾಡಿನಲ್ಲಿ ನಾವು ವಿಶೇಷವಾಗಿ ಕಾಫಿ ಬೆಳೆಯತಕ್ಕಂತಹ ಪ್ರದೇಶ. ಅದನ್ನು ಭೂ ಮಿತಿ ಕಾಯಿದೆಯಿಂದ ಹೊರಗೆ ಇಟ್ಟಿದ್ದಾರೆ. ಆ ದೃಷ್ಟಿಯಿಂದ plantations crop ಗೆ ಸಂಬಂಧ ಪಟ್ಟ ಹಾಗೆ ಮಾನ್ಯ ಕಂದಾಯ ಸಚಿವರು ಇಲ್ಲಿದ್ದಾರೆ. ತಾವು ವಿಶೇಷವಾಗಿ ಒಂದು ಸಭೆ ಕರೆದು ತಾವು ಮತ್ತು ಅರಣ್ಯ ಇಲಾಖೆ ಸಚಿವರು ಮಾನ್ಯ ಮುಖ್ಯ ಮಂತ್ರಿಗಳು ಇರಬೇಕಾಗುತ್ತದೆ. ಸುಮಾರು 21 ಕಾಫಿ ಬೆಳೆಗಾರರ ಸಂಘಗಳಿವೆ. ನಮ್ಮನ್ನೆಲ್ಲ ವಿಶ್ವಾಸಕ್ಕೆ ತೆಗೆದುಕೊಂಡು ಈ ಕಾಫಿ ಬೆಳೆ ಬಗ್ಗೆ ಒಂದು ತೀರ್ಮಾನಕ್ಕೆ

ಬರಬೇಕೆಂದು ಒಂದು ಒತ್ತಾಯ ತಮ್ಮ ಮುಂದಿದೆ. ಆದರೆ ಜನರಲ್ ಆಗಿ ಹೇಳುವುದಾದರೆ, ಬಡವರು 3 ಗುಂಟೆ, 8 ಗುಂಟೆ, 12 ಗುಂಟೆ ಇರುವವರೆಗೂ ನೋಟಿಸ್ ಕೊಟ್ಟಿದ್ದಾರೆ. ಕಾರಣ ನೀವು ಹೇಳಿದ ಹಾಗೆ ಭೂ ಕಂದಾಯ ಕಾಯಿದೆ 192(A) ಇದಕ್ಕೆ ಒಂದು ತಿದ್ದುಪಡಿ ತಂದು ಸರ್ಕಾರ ವಾಪಸ್ ತೆಗೆದುಕೊಳ್ಳಬೇಕು. Urban area ದಲ್ಲಿ. . .

ಅಧ್ಯಕ್ಷರು:– ನೀವು ಮಾತನಾಡುವುದಕ್ಕೆ ಇನ್ನು ಎಷ್ಟು ಸಮಯ ಬೇಕು?

ಶ್ರೀ ಬಿ.ಬಿ. ನಿಂಗಯ್ಯ:– ಇನ್ನು ಐದು ನಿಮಿಷದಲ್ಲಿ ಮುಗಿಸುತ್ತೇನೆ.

ಅಧ್ಯಕ್ಷರು:– ಆಯಿತು ಮಾತನಾಡಿ. ಏಕೆಂದರೆ, ಗಮನ ಸೆಳೆಯುವ ಸೂಚನೆಗಳು ಇವೆ ಅವುಗಳನ್ನು ಪೂರೈಸಿ ಇದನ್ನು ನಾಳೆ ತೆಗೆದುಕೊಳ್ಳೋಣ.

ಶ್ರೀ ಬಿ.ಬಿ. ನಿಂಗಯ್ಯ:– ಐದು ನಿಮಿಷದಲ್ಲಿ ಮುಗಿಸುತ್ತೇನೆ ಅಧ್ಯಕ್ಷರೆ.

ಅಧ್ಯಕ್ಷರು:– ಆಯಿತು ಹೇಳಿ.

ಶ್ರೀ ಬಿ.ಬಿ. ನಿಂಗಯ್ಯ:– Land Revenue Act 192(A) ಏನಿದೆ, ಅದು Urban area ದಲ್ಲಿ Land grabbers ಯಾರಿದ್ದಾರೆ, ಅವರ ವಿರುದ್ಧ ಭೂಗಳ್ಳರು ಎನ್ನತಕ್ಕಂತಹ ಪದವನ್ನು ಬಳಸಿರತಕ್ಕಂಥದ್ದು. ಇದು ದೇಶಕ್ಕೆ ಅನ್ನ ಕೊಡತಕ್ಕಂತಹ ರೈತನಿಗೂ ಕೂಡ ಅನ್ವಯಿಸಿ ಒಂದು ಗುಂಟೆ ಮಾಡಿದರೂ ಕೂಡ ಈ Act ಪ್ರಕಾರ ಒಳಗೆ ಹಾಕಬೇಕೆಂದು ಹೇಳುತ್ತದೆ. ಆ ದೃಷ್ಟಿಯಿಂದ ಮಾನ್ಯ ಕಂದಾಯ ಸಚಿವರಲ್ಲಿ ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ, ಇದಕ್ಕೊಂದು amendment ತನ್ನಿ. ಅನ್ನ ಕೊಡತಕ್ಕಂತಹ ರೈತನನ್ನೂ ಕೂಡ ಕಳ್ಳ ಎಂದು ಹೇಳುವುದು ದೇಶಕ್ಕೆ ಅನ್ನ ಕೊಡತಕ್ಕಂತಹ ರೈತನಿಗೆ ನಾವು ಮಾಡುವಂತಹ ಅಪಮಾನ. ಆ ಕಾರಣದಿಂದ ಕಂದಾಯ ಇಲಾಖೆ ತಂದಿರತಕ್ಕಂತಹ ತಿದ್ದುಪಡಿ ಏನಿದೆ, ಅದನ್ನು ಪುನಃ ವಾಪಸ್ ತೆಗೆದುಕೊಂಡು repeal ಮಾಡಬೇಕು. ರೈತರಿಗೆ ಅನುಕೂಲ ಆಗಬೇಕೆನ್ನುವ ಒಂದೇ ದೃಷ್ಟಿಯಿಂದ ಹೇಳುತ್ತಿದ್ದೇನೆ. ಇನ್ನು ಮುಂದುವರೆದು Form No.50 53 ಬಗ್ಗೆ ಮಾತನಾಡತಕ್ಕಂತಹ ಸಂದರ್ಭದಲ್ಲಿ 53 ಬಹಳ ಜನ ರೈತರು ತಮಗೂ

ಗೊತ್ತಿದೆ ಎಲ್ಲಾ ಭಾಗದಲ್ಲಿ ಅಮಾಯಕರು ಹಿಂದುಳಿದವರು, ದಲಿತರು, ಬಹಳ ಜನ ಅರ್ಜಿ ಕೊಟ್ಟುಕೊಂಡಿಲ್ಲ. ಅರ್ಜಿ ಕೊಡುವುದಕ್ಕೆ ಇನ್ನು ಸ್ವಲ್ಪ ಸಮಯ ಬೇಕು. Extend ಮಾಡಿ ಸಮಯ ಕೊಟ್ಟರೆ ಯಾರ್ಯಾರು ಅರ್ಜಿ ಹಾಕಿಕೊಂಡಿಲ್ಲ, ಅವರು ಹಾಕಿಕೊಳ್ಳುತ್ತಾರೆ. ಅವರೂ ಕೂಡ ಅಕ್ರಮ ಸಕ್ರಮ ಕಾನೂನು ಅಡಿಯಲ್ಲಿ ಅವರಿಗೆ ಅನುಕೂಲ ಮಾಡಿಕೊಡುವುದಕ್ಕೆ ಬರುತ್ತದೆ. ಅದೂ ಮಾಡಿ ಕೊಡಬೇಕು. ಗ್ರಾಮ ಅರಣ್ಯ ಸಮಿತಿಗಳನ್ನು ಬಹಳ ಕಡೆ ಇನ್ನೂ ಮಾಡಿಲ್ಲ. ಅದಕ್ಕೂ ಅವಕಾಶ ಮಾಡಿ ಕೊಡುವುದರ ಮೂಲಕ 2006ರ Tribal and Forest Dwellers Protection Act ಏನಿದೆ, ಅದರ ಪ್ರಕಾರ ಬಹಳ ಜನರಿಗೆ ಅನುಕೂಲ ಮಾಡುವುದಕ್ಕೆ ಬರುತ್ತದೆ. 10 ಎಕರೆ ಒಳಗೆ ಇರುವವರಿಗೆ ಮಾಡುವುದಕ್ಕೆ ಅವಕಾಶ ಇದೆ. ಆ ದೃಷ್ಟಿಯಿಂದ ಇದಕ್ಕೆ ಅವಕಾಶ ಕೊಟ್ಟು ಗ್ರಾಮ ಅರಣ್ಯ ಸಮಿತಿಗಳನ್ನು ರಚನೆ ಮಾಡುವುದು ಇನ್ನೊಂದು ಸಾರಿ ಮಾಡಿ ಯಾವ ರೈತರಿಗೂ ತೊಂದರೆಯಾಗದ ಹಾಗೆ ಯಾರು ದೊಡ್ಡವರಿದ್ದಾರೆ, ಅದರ ಮೇಲೆ ಇವತ್ತು ಕೋರ್ಟ್ ಕೂಡ ಹೇಳಿದೆ, ಸರ್ಕಾರವೂ ಹೇಳಿದೆ, ಅದರ ಬಗ್ಗೆ ಸ್ಪಷ್ಟ ತೀರ್ಮಾನಕ್ಕೆ ಬಂದು ಮಾನ್ಯ ಅರಣ್ಯ ಇಲಾಖೆಯ ಸಚಿವರು ಹಾಗೂ ಕಂದಾಯ ಇಲಾಖೆಯ ಸಚಿವರು ಇಬ್ಬರೂ ಇದ್ದೀರಿ ಇಲ್ಲಿ. ನಮ್ಮ Plantation Act ಗೆ ಹೊರತುಪಡಿಸಿ, ರಾಜ್ಯದ ಎಲ್ಲಾ ಭಾಗದಲ್ಲಿ ಒತ್ತುವರಿ ಇದೆ. ಬಡವರಿಗೆ ನಾನು ವಿನಂತಿ ಮಾಡುತ್ತೇನೆ. ನೀವು ಮತ್ತೊಮ್ಮೆ ಒಂದು ವರ್ಷವೋ ಎರಡು ವರ್ಷವೋ ಅವಕಾಶ ಕೊಟ್ಟು ಅರ್ಜಿ ಹಾಕದೆ ಇರುವವರಿಗೆ ಅರ್ಜಿ ಹಾಕುವುದಕ್ಕೆ ಕಾಲಾವಕಾಶ ಕೊಟ್ಟು ಎಲ್ಲ ಬಡವರಿಗೂ ಜಮೀನು ಮಂಜೂರು ಮಾಡತಕ್ಕಂತಹ ಕೆಲಸ ಸರ್ಕಾರ ಮಾಡಬೇಕೆಂದು ವಿನಂತಿ ಮಾಡಿ, ಇನಾಂ ಭೂಮಿ ಬಗ್ಗೆ ಇಲ್ಲಿ ನಾಲ್ಕಾರು ಸಾರಿ ಚರ್ಚೆ ಮಾಡಿದ್ದೇವೆ.

ಅಧ್ಯಕ್ಷರು:– ನಿಮ್ಮ ಇನಾಂ ಭೂಮಿ ವಿಚಾರವಾಗಿ ನನಗೂ facts ಸರಿಯಾಗಿ ಗೊತ್ತಿಲ್ಲ. ಅದೇನು Forest ಎಂದು ಪರಿಗಣಿಸಿ Forest Act ಪ್ರಕಾರ ತೀರ್ಮಾನ ಮಾಡಬೇಕೋ ಅಥವಾ Inam Abolition ಆಗಿ ಹೋಗಿದೆ, ಇಲ್ಲ. Inam Abolition ಆದ ಮೇಲೆ ಅದು ಯಾರ ಹೆಸರಿಗೆ ಖಾತೆ ಆಗುತ್ತದೋ?

ಶ್ರೀ ಬಿ.ಬಿ. ನಿಂಗಯ್ಯ:– ರೈತರ ಹೆಸರಿಗೆ ಆಗಿದೆ. ಬಹಳ ಜನರಿಗೆ 2006ರ ಗಿರಿಜನರು ಮತ್ತು ಪಾರಂಪರಿಕ ಅರಣ್ಯ ವಾಸಿಗಳು ಇದ್ದಾರೆ. ಆ ಕಾನೂನಿನ ಅಡಿಯಲ್ಲಿ ಅವರಿಗೆ ಮಾಡುವುದಕ್ಕೆ ಬರುತ್ತದೆ. ಅವರಿಗೆ ಅವಕಾಶ ಕೊಟ್ಟಿಲ್ಲ. ಈಗ ಸಮಿತಿಗಳನ್ನು ರಚಿಸಿದ್ದೇವೆ.

ಅಧ್ಯಕ್ಷರು:– Inam Abolition Act ಪ್ರಕಾರ ಆ ಭೂಮಿ ಅರಣ್ಯ ಎಂದು ಆಗಿದ್ದರೆ ಇನಾಂ ಎಂದು ಮತ್ತೆ ಹೇಳುವುದಕ್ಕೆ ಹೋಗಬೇಡಿ.

ಶ್ರೀ ವೈ.ಎಸ್.ವಿ. ದತ್ತಾ:– ಅರಣ್ಯ ಎಂದು ಆಗಿದೆ.

ಅಧ್ಯಕ್ಷರು:– ಹಾಗಾದರೆ ಇನಾಂ ಎಂದು ಹೇಳುವುದಕ್ಕೆ ಹೋಗಬೇಡಿ. ಅರಣ್ಯ ಜಮೀನು ಎಂದು ಹೇಳಿ.

ಶ್ರೀ ಬಿ.ಬಿ. ನಿಂಗಯ್ಯ:– ಸರಿ ಸಾರ್, ಇಲ್ಲಿ ಬಂದಿರತಕ್ಕಂಥದ್ದು ಆ ರೀತಿಯಿತ್ತು. ನಾನು ಈಗ ಸರ್ಕಾರವನ್ನು ಇಷ್ಟೇ ವಿನಂತಿ ಮಾಡತಕ್ಕಂಥದ್ದು,

ಅಧ್ಯಕ್ಷರು:– ಆ ಇನಾಂ ಇನಾಂ ಎಂದು ಹೇಳುತ್ತಿದ್ದೀರಲ್ಲ ಅದು ನಿಮ್ಮ ಕ್ಷೇತ್ರಕ್ಕೆ ಸಂಬಂಧಿಸಿದ್ದೇ?

ಶ್ರೀ ಬಿ.ಬಿ. ನಿಂಗಯ್ಯ:– ಹೌದು ಸಾರ್, ಕಳಸಾ.

ಅಧ್ಯಕ್ಷರು:– ಕಳಸಾ ಯಾರ ಕ್ಷೇತ್ರ?

ಶ್ರೀ ಬಿ.ಬಿ. ನಿಂಗಯ್ಯ:– ನನ್ನ ಕ್ಷೇತ್ರ.

ಅಧ್ಯಕ್ಷರು:– ಹಾಗಾದರೆ ನೀವು ಊರೂರು ತಿರುಗಿ ಪ್ರತಿ ಗ್ರಾಮದಲ್ಲಿ ಅರಣ್ಯ ಹಕ್ಕು ಸಮಿತಿಯನ್ನು ರಚನೆ ಮಾಡಿಸ್ರಿ. ಸಮಿತಿ ರಚನೆ ಮಾಡಿಸಿ ಅರ್ಜಿಗಳನ್ನು ಕೊಡಿಸಿ.

ಶ್ರೀ ಬಿ.ಬಿ. ನಿಂಗಯ್ಯ:– ಮಾಡಿಸುತ್ತೇನೆ. ಈಗಾಗಲೇ ಸುಮಾರು 32 ಸಮಿತಿಗಳನ್ನು ಮಾಡಿಸಿದ್ದೇನೆ. ಯಾವ ಯಾವ ಗ್ರಾಮದಲ್ಲಿಯೋ ಅಲ್ಲೆಲ್ಲಾ ಕಡೆಯಲ್ಲಿಯೂ ಸಮಿತಿಗಳನ್ನು ಮಾಡಿಸಿದ್ದೇನೆ ಮತ್ತು ಅರ್ಜಿಗಳನ್ನು ಕೂಡ ಮಾನ್ಯ ಸಚಿವರಿಗೆ ಕೊಟ್ಟಿದ್ದೇನೆ. ಆದುದರಿಂದ ಇದಕ್ಕೆ ವಿಶೇಷವಾಗಿ ಒತ್ತು ಕೊಡಬೇಕೆಂದು ನಾನು ಮತ್ತೆ ಮತ್ತೆ ವಿನಂತಿ ಮಾಡುತ್ತೇನೆ. ಬಡವರು ಏನು

ಅಲ್ಲಲ್ಲಿ ಅಕ್ರಮವಾಗಿ ಸಾಗುವಳಿಯನ್ನು 5 ಎಕರೆಯೊಳಗೆ ಮಾಡಿದ್ದಾರೋ ಅವರಿಗೆ ಒಂದು ಕಾಲಾವಕಾಶವನ್ನು ಕೊಟ್ಟು ಅವರಿಗೆ ಆ ಜಮೀನನ್ನು ಮಾಡಿಕೊಡಬೇಕು ಎನ್ನುವುದಕ್ಕೆ ಸಂಬಂಧಪಟ್ಟಂತೆ ಅಗತ್ಯವಿರತಕ್ಕಂಥ ತಿದ್ದುಪಡಿಯನ್ನು ತಾವು ತಂದು ಅವರಿಗೆ ಸಹಾಯ ಮಾಡಿ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಇನ್ನು ಕಾಫಿ ಬೆಳೆಗಾರರ ಬಗ್ಗೆ ಅವರು ಕೇಳಿಕೊಂಡಿದ್ದಾರೆ, ಏನೆಂದರೆ ಕರ್ನಾಟಕದಲ್ಲಿ ಮತ್ತು ಕೇರಳದಲ್ಲಿ ಇದು ಭೂಮಿತಿ ಕಾಯಿದೆಗೆ ಮೀರಿದ ಒಂದು Plantation Act ತಂದಿದ್ದಾರೆ. ಅದರಡಿಯಲ್ಲಿ ಅವರಿಗೆ ವಿಶೇಷವಾಗಿ ಒಂದು ಬೆಳೆ ಎಂಬುದನ್ನು ಗಮನದಲ್ಲಿಟ್ಟುಕೊಂಡು ಇವತ್ತು ತಮಗೆ ಇಷ್ಟನ್ನು ಹೇಳಬಯಸುತ್ತೇನೆ. ಇವತ್ತು Coffee is a most eco-friendly plantation crop. India is the 5th largest producer in the world.

ಅಧ್ಯಕ್ಷರು:– ನಿಮಗೆ ನಾನು ಒಂದು ಮಾತನ್ನು ಹೇಳುತ್ತೇನೆ. ಕಾಫಿ ಬೆಳೆಗಾರರು un-authorized ಆಗಿ ಸಾಗುವಳಿ ಮಾಡುತ್ತಿರುವ ಜಮೀನನ್ನು ಅವರಿಗೆ ಮಂಜೂರು ಮಾಡುವ ಬಗ್ಗೆ ಹೇಳುತ್ತಿದ್ದೀರಿ. ತಾವು ಇಡೀ ರಾಜ್ಯದಲ್ಲಿರುವ ಕಾಫಿ ಬೆಳಗಾರರ ಒಂದು ಸಮ್ಮೇಳನವನ್ನು ಕರೆದು ಅದಕ್ಕೆ ಮುಖ್ಯಮಂತ್ರಿಗಳನ್ನು ಮತ್ತು ಕಂದಾಯ ಸಚಿವರನ್ನು ಅಲ್ಲಿಗೆ ಆಹ್ವಾನಿಸಿ, ಅವರ ಎದುರಿಗೆ ಸಮಗ್ರವಾಗಿ ಚರ್ಚೆ ಮಾಡಿ ಒಂದು ಒಳ್ಳೆಯ ವಾತಾವರಣವನ್ನು ಸೃಷ್ಟಿ ಮಾಡಿಸಿ.

ಶ್ರೀ ಬಿ.ಬಿ. ನಿಂಗಯ್ಯ:– ಸಾರ್, ನಾವು ಹಲವು ಬಾರಿ ಭೇಟಿ ಮಾಡಿದ್ದೇವೆ. ಆದರೆ ತಾವು ಇಲ್ಲಿ ಅವಕಾಶ ಕೊಟ್ಟಿರುವುದರಿಂದ ಹೇಳುತ್ತಿದ್ದೇನೆ. ಮತ್ತೊಮ್ಮೆ ಸಮ್ಮೇಳನ ಕರೆದು ಇದಕ್ಕೆ ಕೊನೆ ಹಾಡು ಹಾಡಬೇಕು. ಇಲ್ಲದಿದ್ದರೆ ಅಲ್ಲಿ ambiguity ಇದೆ. ರೈತರಿಗೆ ದಿನಬೆಳಗಾದರೆ ತೊಂದರೆ ಕೊಡುತ್ತಿದ್ದಾರೆ. ಆ ಎಲ್ಲ ಕಾರಣಕ್ಕಾಗಿ ಸರ್ಕಾರ ತುರ್ತಾಗಿ ಅವರದ್ದೊಂದು ಸಭೆ ಕರೆದು ರೈತರಿಗೆ ತೊಂದರೆಯಾಗದಂತೆ ತೀರ್ಮಾನ ತೆಗೆದುಕೊಳ್ಳಬೇಕು ಎನ್ನತಕ್ಕಂಥ ವಿನಂತಿಯನ್ನು ಮಾಡುತ್ತೇನೆ. ಬಡವರಿಗೆ ಈಗಿರುವ ಕಾನೂನಿನಲ್ಲಿ ಆಗಿರತಕ್ಕಂಥ ತೊಂದರೆಯನ್ನು ನಿವಾರಿಸಿ ರೈತರಿಗೆ

ಅನುಕೂಲ ಮಾಡಿಕೊಡಬೇಕೆಂದು ವಿನಂತಿ ಮಾಡುತ್ತಾ ಬಾಲಸುಬ್ರಮಣಿಯನ್ ವರದಿಯನ್ನು ಮಾನ್ಯ ಅಧ್ಯಕ್ಷರೆ ಹೇಳಿದಂತೆ ಇದನ್ನು ಒಪ್ಪಿಕೊಂಡಿಲ್ಲ ಎನ್ನತಕ್ಕಂಥ ತೀರ್ಮಾನವನ್ನು ಸರ್ಕಾರವೇ ತೆಗೆದುಕೊಳ್ಳುವುದಕ್ಕೆ ಇರುವ ಕಷ್ಟವಾದರೂ ಏನು? ನಗರ ಪ್ರದೇಶಕ್ಕೆ Land Grabbers Act ಏನಿದೆ, ಅದನ್ನು ಜಾರಿಗೆ ತನ್ನಿ. ಆದರೆ ಅದನ್ನು ಮಾಡಲಿಲ್ಲ. ಹಳ್ಳಿಯಲ್ಲಿರತಕ್ಕಂಥ ರೈತರಿಗೆ ಇವತ್ತು ತೊಂದರೆ ಕೊಡತಕ್ಕಂಥ ಕೆಲಸವನ್ನು ಮಾಡುತ್ತಿರತಕ್ಕಂಥದ್ದನ್ನು ನಿಲ್ಲಿಸಿ. ಆದುದರಿಂದ ಇದರ ಬಗ್ಗೆ ಸ್ಪಷ್ಟವಾಗಿ ನೀವು ಕೋರ್ಟಿಗೆ ಹೇಳಬೇಕು. ಈ ಮನೆಗಿರತಕ್ಕಂಥ ಪರಮಾಧಿಕಾರವನ್ನು ಬಳಸಿ ರೈತರನ್ನು ರಕ್ಷಣೆ ಮಾಡತಕ್ಕಂಥದ್ದು ನಮ್ಮ ಹೊಣೆ, ಜವಾಬ್ದಾರಿ. ಅದನ್ನು ಈ ಸರ್ಕಾರ ಮಾಡುತ್ತದೆ, ರೈತರ ಪರವಿದೆ ಎನ್ನತಕ್ಕಂಥದ್ದರ ಬಗ್ಗೆ ತಮ್ಮ ಬದ್ಧತೆಯನ್ನು ಪ್ರದರ್ಶನ ಮಾಡಬೇಕೆಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:– ಮಾನ್ಯ ಅಧ್ಯಕ್ಷರೆ, ,

ಅಧ್ಯಕ್ಷರು:– ಪುಟ್ಟಣ್ಣಯ್ಯನವರೆ ಈಗ ಒಂದು ಕೆಲಸ ಮಾಡೋಣ. ಈಗ ಗಮನ ಸೆಳೆಯುವ ಸೂಚನೆಗಳು ಒಂದಿಷ್ಟು ಇವೆ. ಅದನ್ನು dispose ಮಾಡಿಬಿಡೋಣ. ಅಕಸ್ಮಾತ್ ಹತ್ತು ನಿಮಿಷ ಹದಿನೈದು ನಿಮಿಷ ಸಮಯ ಸಿಕ್ಕರೆ ನಾನು ತಮಗೆ ಮಾತನಾಡಲು ಅವಕಾಶ ಕೊಡುತ್ತೇನೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:– ನಾಳೆ ಇದರ ಬಗ್ಗೆ ಮಾತನಾಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಈ ಅತಿಕ್ರಮಣದ ವಿಷಯವನ್ನು ನಾಳೆಗೆ ಚರ್ಚೆಗೆ ಹಾಕಿಕೊಳ್ಳಿ. ಏಕೆಂದರೆ ನಾವುಗಳು ಕೂಡ ಇದರ ಬಗ್ಗೆ ಮಾತನಾಡಬೇಕಿದೆ. ಈಗ ಗಮನ ಸೆಳೆಯುವ ಸೂಚನೆಗಳನ್ನು ತೆಗೆದುಕೊಳ್ಳಿ.

ಅಧ್ಯಕ್ಷರು:– ಆಯಿತು. ನಾಳೆ ಇದನ್ನು ಹಾಕಿಕೊಂಡು ಮುಂದುವರಿಸೋಣ. ಈಗ ಗಮನ ಸೆಳೆಯುವ ಸೂಚನೆಗಳನ್ನು ತೆಗದುಕೊಳ್ಳುತ್ತೇನೆ. ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿದ್ದ ಹೆಚ್.ಎನ್. ಸುಬ್ಬಾರೆಡ್ಡಿಯವರು ಈಗ ಸದನದಲ್ಲಿ ಇಲ್ಲ.